ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜುಲೈ 22, 2021

ಸಂಪುಟ : 48 ಸಂಚಿಕೆ : 69 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

## ಜಿಲ್ಲೆಯಲ್ಲಿ ಪಾಸಿಟಿವಿಟಿ ದರ ಶೇ.0.93ಕ್ಕೆ ಇಳಿಕೆ

ದಾವಣಗೆರೆ, ಜು.21- ಜಿಲ್ಲೆಯಲ್ಲಿ ಕಳೆದೊಂದು ವಾರದ ಕೊರೊನಾ ಪಾಸಿಟಿವಿಟಿ ದರ ಶೇ.0.93 ಹಾಗೂ ಮರಣ ಪ್ರಮಾಣ ದರ ಶೇ.1.48ಕ್ಕೆ ಇಳಿಕೆಯಾಗಿದೆ.

ಬುಧವಾರ 13 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ. 11 ಜನರು ಗುಣ ಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 7, ಹರಿಹರ 2, ಜಗಳೂರು 1, ಚನ್ನಗಿರಿ 1, ಹೊನ್ನಾಳಿ 1 ಹಾಗೂ ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 346 ಸಕ್ರಿಯ ಪ್ರಕರಣಗಳಿವೆ.

## ಕನಕದಾಸರ ಏಕಶಿಲೆ ವಿಗ್ರಹಕ್ಕೆ 5 ಕೋಟಿ ರೂ. ಬಿಡುಗಡೆ



ಬೆಂಗಳೂರು, ಜು.21- ಹೊಸದುರ್ಗ ತಾಲ್ಲೂಕಿನ ಕನಕಧಾಮದಲ್ಲಿ ಕನಕದಾಸರ ಏಕಶಿಲಾ ವಿಗ್ರಹಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 10 ಕೋಟಿ ರೂ.ಅನುದಾನ ಘೋಷಣೆ ಮಾಡಿದ್ದು, ಈ ಪೈಕಿ ತಕ್ಷಣವೇ 5 ಕೋಟಿ ರೂ. ಅನುದಾನ ಬಿಡುಗಡೆಗೆ ಆದೇಶಿಸಿದ್ದಾರೆ.

ಯಡಿಯೂರಪ್ಪ ಅವರನ್ನು ಅವರ ಗೃಹ ಕಚೇರಿ ಕಾವೇರಿಯಲ್ಲಿ ಇಂದು ಭೇಟಿ ಮಾಡಿದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಈ ಸಂಬಂಧ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಕನಕ ಧಾಮದಲ್ಲಿ ಭಾರತದ ಅತಿ ಎತ್ತರವಾದ ಕನಕ ಶಿಲಾ ಮೂರ್ತಿಯು ಪ್ರತಿಷ್ಠಾಪನೆಗೊಳ್ಳುತ್ತಿದ್ದು, ಹಣಕಾಸಿನ ಕೊರತೆ ಯಿಂದ ಕಾರ್ಯವು ಸ್ಥಗಿತಗೊಂಡಿರುತ್ತದೆ. ಇದೊಂದು ಪ್ರವಾಸಿ ಕೇಂದ್ರವಾಗಿ ಸಮುದಾಯಕ್ಕೆ ಅರ್ಪಣೆಯಾಗಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ನೆರವು ನೀಡುವಂತೆ ಶ್ರೀಗಳು (2ನೇ ಪುಟಕ್ಕೆ)

# ಸಿಎಂ ನಿವಾಸಕ್ಕೆ ಮಠಾಧೀಶರ ದಂಡು

## ನಾಯಕತ್ವದ ಬದಲಾವಣೆ ಭುಗಿಲೆದ್ದರೂ ಮೌನಕ್ಕೆ ಶರಣಾದ ಯಡಿಯೂರಪ್ಪ

ಬೆಂಗಳೂರು, ಜು. 21 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬೆನ್ನಿಗೆ ವೀರಶೈವ ಸಮಾಜದ ಮಠಾಧೀಶರು, ಕಾಂಗ್ರೆಸ್ ಮುಖಂಡರು ನಿಂತಿದ್ದರೂ ಯಡಿಯೂರಪ್ಪ ಮಾತ್ರ ನಾಯಕತ್ವ ಬದಲಾವಣೆ ಬಗ್ಗೆ ಮೌನಕ್ಕೆ ಶರಣಾಗಿದ್ದಾರೆ.

ನಾಯಕತ್ವ ಬದಲಾವಣೆ ಖಚಿತ ಎನ್ನುತ್ತಿದ್ದಂತೆ ಕಳೆದ ಮೂರು ದಿನಗಳಿಂದ ಯಡಿಯೂರಪ್ಪ ಅವರ ನಿವಾಸಕ್ಕೆ ಮಠಾಧೀಶರ ದಂಡೇ ಬರುತ್ತಿದೆ. ಅಲ್ಲದೆ ತಮ್ಮ ಆಪ್ತ ಸಚಿವರು, ಶಾಸಕರು ಭೇಟಿ ಮಾಡುತ್ತಿದ್ದಾರೆ. ಆದರೆ, ಯಡಿಯೂರಪ್ಪ ಮಾತ್ರ ನಾಯಕತ್ವದ ಬಗ್ಗೆ ಚಕಾರವೆತ್ತುತ್ತಿಲ್ಲ.


ಅಷ್ಟೇ ಅಲ್ಲ ಮುಂದೇನು ಎಂಬುದರ ಬಗ್ಗೆಯು ಏನನ್ನೂ ಹೇಳುತ್ತಿಲ್ಲ. ಸಿದ್ಧಗಂಗಾ ಶ್ರೀಗಳು ಸೇರಿದಂತೆ, ಅನೇಕ ಮಠಾಧೀಶರು ಭೇಟಿ ಮಾಡಿದ ಸಂದರ್ಭದಲ್ಲೂ ವರಿಷ್ಠರ ನಿರ್ಧಾರಕ್ಕೆ ತಲೆಭಾಗಬೇಕಾಗುತ್ತದೆ ಎಂದಿದ್ದಾರೆ ಯೇ ಹೊರತು, ಬೇರೆನನ್ನೂ ಹೇಳುತ್ತಿಲ್ಲ.

ಭೇಟಿಯಾದ ಗಣ್ಯರು ನೀಡುವ ಸಲಹೆ ಸೂಚನೆಗಳನ್ನು ಆಲಿಸುತ್ತಾರೆ. ಆದರೆ, ಅವ ರಿಂದ ಯಾವುದೇ ಪ್ರತಿಕ್ರಿಯೆ ಹೊರಬಂದಿಲ್ಲ. ಮೌನದಿಂದಲೇ ಎಲ್ಲವನ್ನೂ ಸ್ವೀಕರಿಸುತ್ತಿರುವ ಮುಖ್ಯಮಂತ್ರಿಯವರು 25 ರಂದು ರಾತ್ರಿ ಪಕ್ಷದ ಶಾಸಕರಿಗೆ ಕರೆಯಲಾಗಿದ್ದ ಔತಣಕೂಟವನ್ನು ರದ್ದುಪಡಿಸಿದ್ದಾರೆ.

ಬಹುತೇಕ 28 ರಂದು ಶಾಸಕಾಂಗ ಸಭೆ ಕರೆಯಲು ಸಿದ್ಧತೆ ಮಾಡಿಕೊಳ್ಳುವಂತೆ ಸರ್ಕಾ ರದ ಮುಖ್ಯ ಸಚೇತಕ ಸುನೀಲ್ ಕುಮಾರ್ ಅವರಿಗೆ ಪಕ್ಷದಿಂದ ಸಂದೇಶ ಬಂದಿದೆ. ಈ ಸಂದೇಶ ಬಂದಿರುವ (2ನೇ ಪುಟಕ್ಕೆ)



### ಪೂರ್ಣಾವಧಿ ಕೆಲಸ ಮಾಡಲು ಅವಕಾಶ ನೀಡಿ



ಸಾಣೇಹಳ್ಳಿ, ಜು.21- ಹಾಲಿ ಇರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನವರು ಪೂರ್ಣಾವಧಿ ಕೆಲಸ ಮಾಡುವಂತೆ ಅವಕಾಶ ನೀಡ ಬೇಕು ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಮೂರ್ನಾಲ್ಕು ದಿನಗಳಿಂದ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಬದಲಾಯಿಸುವ ಮಾತುಗಳು ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಯಾವುದೇ ಸರ್ಕಾರವಿರಲಿ, ಪೂರ್ಣ (2ನೇ ಪುಟಕ್ಕೆ)

### ಯಡಿಯೂರಪ್ಪ ಅವಧಿ ಪೂರೈಸಲಿ



ಬೆಂಗಳೂರು, ಜು. 21 - ಮುಖ್ಯಮಂತ್ರಿ ಯಡಿಯೂರಪ್ಪ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ, ಅವರು ಪೂರ್ಣಾವಧಿ ಸಿಎಂ ಆಗಿರಬೇಕೆಂಬುದು ಎಲ್ಲ ಮಠಾಧೀಶರ ಆಶಯವಾಗಿದೆ ಎಂದು ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ತಿಳಿಸಿದ್ದಾರೆ.

ಕಾವೇರಿ ನಿವಾಸದಲ್ಲಿ ಸಮಾಜದ ಕೆಲವು ಮಠಾಧೀಶರ ಜೊತೆಗೂಡಿ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ನಮ್ಮ ಜತೆ ಚರ್ಚಿಸುವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಷಾ ಬಗ್ಗೆ ವಿಶೇಷ ಕಾಳಜಿ ವ್ಯಕ್ತಪಡಿಸಿದ್ದಾರೆ. ಬಿಜೆಪಿಯಲ್ಲಿ 75 ವರ್ಷ ಮೀರಿದ ಯಾವುದೇ ವ್ಯಕ್ತಿಗೆ ಅಧಿಕಾರ ನೀಡಿಲ್ಲ. ಇಡೀ ದೇಶದಲ್ಲಿ ನನಗೆ ಮಾತ್ರ ಪಕ್ಷ ಅವಕಾಶ ಮಾಡಿಕೊಟ್ಟಿದೆ (2ನೇ ಪುಟಕ್ಕೆ)

### ಮಠಾಧೀಶರ ಮಧ್ಯಪ್ರವೇಶ ಸಲ್ಲದು



ದಾವಣಗೆರೆ, ಜು. 21 - ಮುಖ್ಯಮಂತ್ರಿ ಬದಲಾ ವಣೆ ವಿಚಾರದಲ್ಲಿ ಮಠಾ ಧೀಶರ ಮಧ್ಯ ಪ್ರವೇಶಕ್ಕೆ ಆಕ್ಷೇಪಿಸಿರುವ ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್, ಮಠಾಧೀಶರು ರಾಜಕೀಯ ಮಾಡಬಾರದು ಎಂದಿದ್ದಾರೆ.

ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ವೀರಶೈವ - ಲಿಂಗಾಯತರು ಎಲ್ಲರೂ ಮಠಾಧೀಶರ ಭಕ್ತರೇ. ನಾನೂ ವೀರಶೈವ - ಲಿಂಗಾಯತನೇ. ಸಚಿವರಾದ ಜಗದೀಶ್ ಶೆಟ್ಟರ್, ಮುರುಗೇಶ್ ನಿರಾಣಿ ಹಾಗೂ ಉಮೇಶ್ ಕತ್ತಿ ಎಲ್ಲರೂ ಲಿಂಗಾಯತರೇ. ಒಬ್ಬರ ಪರವಾಗಿಯೇ ಎಲ್ಲರೂ ಈ ರೀತಿ ಮಾತನಾಡಬಾರದು ಎಂದಿದ್ದಾರೆ. ಕಾಂಗ್ರೆಸ್ ಶಾಸಕರಾದ ಶಾಮನೂರು ಶಿವಶಂಕರಪ್ಪ ಹಾಗೂ ಎಂ.ಬಿ. ಪಾಟೀಲ್ ಅವರು (2ನೇ ಪುಟಕ್ಕೆ)

# ಮುಖ್ಯಮಂತ್ರಿಯಾಗಿ ಸಿ.ಟಿ. ರವಿ ಖಚಿತ ?

## ಕ್ಯಾಬಿನೆಟ್ ಸಚಿವರ ಪಟ್ಟಿಯಲ್ಲಿ ಎಸ್.ಎ. ರವೀಂದ್ರನಾಥ್ ಹೆಸರು ಮುಂಚೂಣಿ

ಬೆಂಗಳೂರು,ಜು.21- ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ನಾಯಕತ್ವದಿಂದ ಪದಚ್ಯುತಿಗೊಳಿಸುವುದು ನಿಶ್ಚಿತವಾಗಿದ್ದು, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದು ಬಹುತೇಕ ಖಚಿತವಾಗಿದೆ.

ಈ ಸಂಬಂಧ ದೆಹಲಿ ಮಟ್ಟದ ವರಿಷ್ಠರಲ್ಲಿ ನಡೆದಿರುವ ಚರ್ಚೆಗಳು ಅಂತಿಮ ರೂಪಕ್ಕೆ ಬಂದಿದ್ದು, ಬಹುಶಃ ಇದೇ ದಿನಾಂಕ 26ರ ನಂತರ ಪ್ರಕಟಣೆ ಹೊರ ಬೀಳಲಿದೆ ಎಂದು ವಿಶ್ವಾಸನೀಯ ಮೂಲಗಳು 'ಜನತಾವಾಣಿ' ಗೆ ಸ್ಪಷ್ಟಪಡಿಸಿವೆ.

ಉಪ ಮುಖ್ಯಮಂತ್ರಿಗಳನ್ನಾಗಿ





ಮೂವರನ್ನು ಮಾಡಲು ನಿರ್ಧರಿಸಲಾಗಿದ್ದು, ಡಾ. ಅಶ್ವತ್ಥ್ ನಾರಾಯಣ, ಬಸವರಾಜ ಬೊಮ್ಮಾಯಿ ಅವರುಗಳ ಹೆಸರು ಅಂತಿಮವಾಗಿದ್ದು, ಮತ್ತೊಂದು ಸ್ಥಾನಕ್ಕೆ ಬಸವರಾಜ ಪಾಟೀಲ್ ಯತ್ನಾಳ್ ಅಥವಾ ಲಕ್ಷ್ಮಣ ಸವದಿ ಇಬ್ಬರ ನಡುವೆ ಸ್ಪರ್ಧೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಕ್ಯಾಬಿನೆಟ್ ಸಚಿವರ ಪಟ್ಟಿಯಲ್ಲಿ ಮಾಜಿ ಸಚಿವರೂ ಆಗಿರುವ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್, ಬಸವರಾಜ ಪಾಟೀಲ್ ಯತ್ನಾಳ್, ಮುರುಗೇಶ್ ನಿರಾಣಿ ಮತ್ತು ಅರವಿಂದ್ ಬೆಲ್ಲದ್ ಅವರುಗಳ ಹೆಸರುಗಳು ಮುಂಚೂಣಿಯಲ್ಲಿವೆ ಎಂದು ಮೂಲಗಳು ಹೇಳಿವೆ.

ವಿಧಾನಸಭೆ ಚುನಾವಣೆಗೆ 2 ವರ್ಷಗಳು ಉಳಿದಿದ್ದು, ಈ ಹಿನ್ನೆಲೆಯಲ್ಲಿ ಆರೆಸ್ಸೆಸ್ ಮೂಲ ದವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡ ಬೇಕೆಂದು ವರಿಷ್ಠರ ಮುಂದೆ ನಡೆದ ಚರ್ಚೆ ಯಲ್ಲಿ ತೀರ್ಮಾನವಾಗಿದೆ. ಈ ದಿಸೆಯಲ್ಲಿ ಸಿ.ಟಿ. ರವಿ ಸೂಕ್ತ ಅಭ್ಯರ್ಥಿ ಎಂಬ ನಿರ್ಣಯಕ್ಕೆ ಬರಲಾಗಿದೆ ಎಂದು ಮೂಲಗಳು ವಿವರಿಸಿವೆ.

### ಬಿಎಸ್‌ವೈಗೆ ಎಸ್ಸೆಸ್ ಬೆಂಬಲ

**ಸಂಸದ ಸಿದ್ದೇಶ್ವರ ಆಕ್ಷೇಪ**

ದಾವಣಗೆರೆ, ಜು.21- ಶಾಸಕ ಶಾಮನೂರು ಶಿವಶಂಕರಪ್ಪ ಅವರು ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಬೆಂಬಲಿಸಿ ನೀಡಿದ ಹೇಳಿಕೆ ಬಗ್ಗೆ ತರಾಟೆಗೆ ತೆಗೆದುಕೊಂಡಿರುವ ಸಂಸದ ಜಿ.ಎಂ. ಸಿದ್ದೇಶ್ವರ, ನಾವೇ ಲಿಂಗಾಯತರ ಪರ ಎಂದು ತೋರಿಸಿಕೊಳ್ಳಲು ಈ ರೀತಿ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದ್ದಾರೆ.



ಬಿಜೆಪಿಯವರು ಯಾರೂ ಲಿಂಗಾಯತರ ಪರ ನಿಲ್ಲಲಿಲ್ಲ ಎಂದು ತೋರಿಸಿಕೊಳ್ಳಲು ಎಸ್ಸೆಸ್ ಈ ರೀತಿ ಮಾಡುತ್ತಿದ್ದಾರೆ. ಬಿಜೆಪಿಗೆ ಚುನಾವಣೆಯಲ್ಲಿ 106 ಸೀಟು ಬಂದಾಗ ಯಾವ ಲಿಂಗಾಯತ ಶಾಸಕರು ಬಂದು ಯಡಿಯೂರಪ್ಪ ಅವರನ್ನು ಬೆಂಬಲಿಸಿದರು (2ನೇ ಪುಟಕ್ಕೆ)

# ನನ್ನ ಪರ ಯಾರೂ ಹೇಳಿಕೆಗೆ, ಪ್ರತಿಭಟನೆಗೆ ಮುಂದಾಗಬಾರದು

ಬೆಂಗಳೂರು, ಜು. 21 – ನಾಯಕತ್ವ ಬದಲಾವಣೆ ಬೇಡ ಎಂಬ ಆಗ್ರಹದೊಂದಿಗೆ ತಮ್ಮ ಪರ ಮಠಾಧೀಶರೂ ಸೇರಿದಂತೆ ಹಲವರು ಬೆಂಬಲಿಸುತ್ತಿರುವುದರ ನಡುವೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ತಮ್ಮ ಪರವಾಗಿ ಯಾರೂ ಹೇಳಿಕೆ ಹಾಗೂ ಪ್ರತಿಭಟನೆಗಳಿಗೆ ಮುಂದಾಗಬಾರದು ಎಂದು ಕರೆ ನೀಡಿದ್ದಾರೆ.

ಟ್ವೀಟ್ ಮೂಲಕ ಈ ವಿಷಯ ತಿಳಿಸಿರುವ ಅವರು, ರಾಜಕೀಯ ಬೆಳವಣಿಗೆಗಳನ್ನಾಧರಿಸಿ ನನ್ನ ಪರವಾಗಿ ಹೇಳಿಕೆ, ಪ್ರತಿಭಟನೆಗಳಿಗೆ ಯಾರೂ ಮುಂದಾಗಬಾರದೆಂದು ವಿನಂತಿಸುತ್ತೇನೆ. ಅಭಿಮಾನ ಶಿಸ್ತಿನ ವ್ಯಾಪ್ತಿ ಮೀರಬಾರದು ಎಂದಿದ್ದಾರೆ.

ಪಕ್ಷ ನನಗೆ ಮಾತೃ ಸಮಾನ,ಅದರ ಗೌರವಕ್ಕೆ ಚ್ಯುತಿ ತರುವ ಘಟನೆಗಳು ನನಗೆ ಅತೀವ ನೋವು ತರುತ್ತದೆ. ನಿಜವಾದ ಹಿತೈಷಿಗಳು ಈ ನಿಟ್ಟಿನಲ್ಲಿ ನನ್ನ ಭಾವನೆಗೆ ಸ್ಪಂದಿಸುತ್ತಾರೆಂದು ನಂಬಿರುವೆ ಎಂದವರು ಹೇಳಿದ್ದಾರೆ.

ಹಲವಾರು ಮಠಾಧೀಶರು ಹಾಗೂ ರಾಜಕೀಯ ನಾಯಕರು ಯಡಿಯೂರಪ್ಪ ಮುಂದುವರಿಕೆಗೆ ಆಗ್ರಹಿಸಿದ್ದಾರೆ. ವೀರಶೈವ – ಲಿಂಗಾಯತ ಮಠದ ಹಲವಾರು ಸ್ವಾಮೀಜಿಗಳು ಯಡಿಯೂರಪ್ಪನವರನ್ನು ಭೇಟಿ ಮಾಡಿ, ನಾಯಕತ್ವ ಬದಲಿಸಿದರೆ ಬಿಜೆಪಿ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.



**ಬದಲಾವಣೆ ಬೆಳವಣಿಗೆಗಳ ನಡುವೆ ಯಡಿಯೂರಪ್ಪ ಕರೆ**

ಈ ನಡುವೆ ಭಿನ್ನಮತದ ಹೇಳಿಕೆ ನೀಡಿರುವ ಬಿಜೆಪಿ ಪರಿಷತ್ ಸದಸ್ಯ ವಿಶ್ವನಾಥ್, ಯಡಿಯೂರಪ್ಪ ಬೆಂಬಲಿಸುವ ಮೂಲಕ ಲಿಂಗಾಯತ ಸ್ವಾಮೀಜಿಗಳು ಭ್ರಷ್ಟರನ್ನು ಬೆಂಬಲಿಸುತ್ತಿದ್ದಾರೆಯೇ? ಎಂದು ಪ್ರಶ್ನಿಸಿದ್ದಾರೆ.

ಮೈಸೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಮಠಾಧೀಶರು ಜನರ ಪರವಾಗಿ ನಿಲ್ಲುವ ಬದಲು ಮುಖ್ಯಮಂತ್ರಿ ಹಾಗೂ ಅವರ ಸರ್ಕಾರದ ಪರವಾಗಿ ನಿಲ್ಲುವ ಮೂಲಕ ತಪ್ಪು ಪದ್ಧತಿ ಅನುಸರಿಸುತ್ತಿದ್ದಾರೆ ಎಂದಿದ್ದಾರೆ.

ಈ ನಡುವೆ ಮುಖ್ಯಮಂತ್ರಿ ಭೇಟಿ ಮಾಡಿದ ನಂತರ ಹೇಳಿಕೆ ನೀಡಿರುವ ಸಂಸದ ಜಿ.ಎಂ. ಸಿದ್ದೇಶ್ವರ, ಹೈ ಕಮಾಂಡ್ ರಾಜೀನಾಮೆ ಕೊಡಿ ಎಂದು ಹೇಳಿಲ್ಲ. ಯಡಿಯೂರಪ್ಪ ಅವರನ್ನು ಉಳಿದ ಅವಧಿಗೂ ಮುಖ್ಯ ಮಂತ್ರಿಯಾಗಿ ಮುಂದುವರೆಸಬೇಕು. ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆಗೆ ಹೋಗಬೇಕು (2ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ :
166 ಅಡಿ 8 ಇಂಚು
ಒಳ ಹರಿವು: 13502 ಕ್ಯೂಸೆಕ್ಸ್
ಹೊರ ಹರಿವು : 794 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 152.10 ಅಡಿ

## ಶೇ.75ರಷ್ಟು ಕಾಲೇಜು ವಿದ್ಯಾರ್ಥಿಗಳಿಗೆ ಲಸಿಕೆ

ಬೆಂಗಳೂರು, ಜು. 21 - ಈ ತಿಂಗಳ 26ರಿಂದ ಪದವಿ ಕಾಲೇಜುಗಳ ಭೌತಿಕ ತರಗತಿಗಳು ಆರಂಭವಾಗುತ್ತಿದ್ದು, ಈವರೆಗೆ ಉನ್ನತ ಶಿಕ್ಷಣ ವಿಭಾಗದ ಶೇ.75ರಷ್ಟು ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಗಿದೆ ಎಂದು ಉನ್ನತ ಶಿಕ್ಷಣ ಖಾತೆ ಸಚಿವರು ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಈಗಾಗಲೇ ವಿದ್ಯಾರ್ಥಿಗಳಿಗೆ ಲಸಿಕೆ ನೀಡುವ ಕಾರ್ಯ ಕ್ರಮ ವೇಗವಾಗಿ ಸಾಗುತ್ತಿದೆ. (2ನೇ ಪುಟಕ್ಕೆ)

# ನಗರದಲ್ಲಿ ಶ್ರದ್ಧಾ-ಭಕ್ತಿಯ ಬಕ್ರೀದ್ ಆಚರಣೆ



ಬಿ. ಸಿಕಂದರ್

ದಾವಣಗೆರೆ, ಜು. 21- ತ್ಯಾಗ ಹಾಗೂ ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ನಗರಾದ್ಯಂತ ಮುಸ್ಲಿಂ ಬಾಂಧವರು ಶ್ರದ್ಧಾ-ಭಕ್ತಿಯಿಂದ ಆಚರಿಸಿದರು.

ಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಈದ್-ಉಲ್-ಅಜ್ಹಾ ಪ್ರಾರ್ಥನೆಯನ್ನು ಬೆಳಿಗ್ಗೆ 7 ಗಂಟೆಯಿಂದಲೇ ಮಸೀದಿಗಳಲ್ಲಿ ತಂಡ ತಂಡವಾಗಿ ಸೇರಿಕೊಂಡು ಪ್ರಾರ್ಥನೆ ಸಲ್ಲಿಸಿದರು.

ದೇಶಾದ್ಯಂತ ಕೋವಿಡ್ ಮಾರ್ಗಸೂಚಿ ಪ್ರಕಾರ ಈದ್ಗಾಗಳಲ್ಲಿ ನಮಾಜ್ ಮಾಡಲು ನಿರ್ಬಂಧಿಸಿದ ಕಾರಣ ಹಾಗೂ ಜಿಲ್ಲಾಡಳಿತದ ಸೂಚನೆ ಮೇರೆಗೆ ಮುಸ್ಲಿಂ ಬಾಂಧವರು ಆಯಾ ಪ್ರದೇಶಗಳಲ್ಲಿರುವ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಹೊಸ ಹೊಸ ಬಟ್ಟೆಗಳನ್ನು ಧರಿಸಿಕೊಂಡು ತಲೆಗೆ ಟೋಪಿ ಹಾಕಿಕೊಂಡು ಮಕ್ಕಳೊಂದಿಗೆ ಮಸೀದಿಗಳತ್ತ ಧಾವಿಸುತ್ತಿದ್ದ ಮುಸ್ಲಿಂ ಬಾಂಧವರು 'ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್' ಎಂಬ ಶ್ಲೋಕ ಓದುತ್ತಾ ಹೆಜ್ಜೆ ಹಾಕುತ್ತಿದ್ದ ದೃಶ್ಯಕಂಡು ಬಂದಿತು. ಬೆಳಿಗ್ಗೆ ಫಜರ್ ನಮಾಜ್ ನಂತರ ಗಂಟೆಗೊಂದು ಜಮಾತ್ ಮಾಡಿ ಹಬ್ಬದ ಪ್ರಾರ್ಥನೆ ಸಲ್ಲಿಸಿದ ಮುಸ್ಲಿಂ ಬಾಂಧವರು ಒಬ್ಬರಿಗೊಬ್ಬರು ಆಲಂಗಿಸುವ ಮೂಲಕ ಹಸ್ತ ಲಾಘವ ಮಾಡಿ ಹಬ್ಬದ ಸಂತೋಷ ವಿನಿಮಯ ಮಾಡಿಕೊಂಡರು.

ದೇಶಕ್ಕೆ ಕಂಟಕವಾಗಿರುವ ಕೊರೊನಾ, ಡೆಲ್ಟಾ ಮೂರನೇ ಅಲೆಯಂತಹ ಕಾಯಿಲೆಗಳು ದೇಶದಿಂದ ತೊಲಗಲಿ ಎಂದು ದುವಾ ಮಾಡಿದ ಉಲೇಮಾಗಳು ನಮ್ಮ ದೇಶ ಸಮೃದ್ಧಿಯತ್ತ ಸಾಗಲಿ ಎಂದು ಆಶಿಸಿ, ಬಕ್ರೀದ್ ಹಬ್ಬದ ಶುಭ ಹಾರೈಸಿದರು.

**ಈದ್ಗಾಕ್ಕೆ ಡಿಸಿ-ಎಸ್ಪಿ ಭೇಟಿ :** ಪ್ರಾರ್ಥನೆ ಸಲ್ಲಿಸಲು ಈದ್ಗಾಗಳಲ್ಲಿ ನಿಷೇಧವಿದ್ದರೂ ಸಹ ಮುಸ್ಲಿಂ ಬಾಂಧವರು ಈದ್ಗಾಕ್ಕೆ ತೆರಳಿ ಅಗಲಿರುವ ತಮ್ಮ ಕುಟುಂಬ ಸದಸ್ಯರಿಗೆ ಹೂ, ಗಂಧ ಅರ್ಪಿಸಿ ದುವಾ ಮಾಡಿದರು. ಹೀಗಾಗಿ ಪಿ.ಬಿ. ರಸ್ತೆಯಲ್ಲಿ ತಂಡ ತಂಡವಾಗಿ ಆಗಮಿಸಿದ ಮುಸ್ಲಿಂ ಬಾಂಧವರು ಕೊಂಚ ಗಂಟೆಗಳ ಕಾಲ ಈದ್ಗಾದಲ್ಲಿದ್ದರು. ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಜಿಲ್ಲಾ ರಕ್ಷಣಾಧಿಕಾರಿ ಸಿ.ಬಿ. ರಿಷ್ಯಂತ್ ಅವರುಗಳು ಈದ್ಗಾಕ್ಕೆ ಭೇಟಿ ನೀಡಿದ್ದರು.

**ಮೀನಾ ಬಜಾರ್‌ನಲ್ಲಿ ಬಕ್ರೀದ್ ಬಹಾರ್ :** ಕಳೆದ ಎರಡು ವರ್ಷಗಳಿಂದ ಮೀನಾ ಬಜಾರ್ ಮಾರ್ಕೆಟ್‌ನಿಂದ ವಂಚಿತರಾಗಿದ್ದ ಮುಸ್ಲಿಂ ಬಾಂಧವರು ಇದ್ದಕ್ಕಿದ್ದಂತೆ ಕಳೆದ ಎರಡು ದಿನಗಳಲ್ಲಿ ಬಿಡಾರ ಹಾಕಿದ್ದ ಮೀನಾ ಬಜಾರ್‌ನಲ್ಲಿ ಈ ಬಾರಿ ಬಹಳ ವಿಶೇಷವಾದ ಐಟಂಗಳು ಲಭ್ಯವಾದವು. ಗೃಹ ಬಳಕೆ ವಸ್ತು ಸೇರಿದಂತೆ ಬಟ್ಟೆ ಅಂಗಡಿಗಳು ಝಗಮಗಿಸುತ್ತಿದ್ದವು. ಟಿವಿ (2ನೇ ಪುಟಕ್ಕೆ)

4ನೇ ವರ್ಷದ ಪುಣ್ಯಸ್ಮರಣೆ



ಜನನ: 21-08-1943
ಲಿಂಗೈಕ್ಯ: 22-07-2017

ಕಕ್ಕರಗೊಳ್ಳದ ಪಟೇಲ್ ವೀರಪ್ಪ ಶಾಲೆ ಹಾಗೂ ನಗರದ ದವನ ಕಾಲೇಜ್‌ನ ಗೌರವಾಧ್ಯಕ್ಷರೂ ಮತ್ತು ಕುಮಾರಪಟ್ಟಣಂ ಗ್ರಾಸಿಂ ಇಂಡಸ್ಟ್ರೀಸ್‌ನ ನಿವೃತ್ತ ಸಹಾಯಕ ಮಹಾಪ್ರಬಂಧಕರೂ ಆಗಿದ್ದ

ಲಿಂ|| ಕಕ್ಕರಗೊಳ್ಳ ಗೌಡ್ರು ಪರಮೇಶ್ವರಪ್ಪ

ಇವರು ಶಿವೈಕ್ಯರಾಗಿ ಇಂದಿಗೆ ನಾಲ್ಕು ವರ್ಷಗಳಾದವು.
ಸದಾ ಅವರ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ,

ಪತ್ನಿ : ಶ್ರೀಮತಿ ಗಿರಿಜಮ್ಮ ಪರಮೇಶ್ವರಪ್ಪ, ದಾವಣಗೆರೆ
ಪುತ್ರಿ : ಡಾ. ಪ್ರಭಾ, ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಜಿಲ್ಲಾ ಉಸ್ತುವಾರಿ ಸಚಿವರು, ಚಿ|| ಸಮರ್ಥ, ಚಿ|| ಶ್ರೇಷ್ಠ, ಮಾ|| ಶಿವ
ಪುತ್ರ : ಶ್ರೀ ಜಿ.ಪಿ. ಪ್ರಕಾಶ್, ಮ್ಯಾನೇಜರ್, ಗ್ರಾಸಿಂ ಇಂಡಸ್ಟ್ರೀಸ್, ಕುಮಾರಪಟ್ಟಣಂ. ಶ್ರೀಮತಿ ಸುಮ ಹಾಗೂ ಚಿ|| ವಿರಾಜಿತ್
ಸಹೋದರರಾದ : ಶ್ರೀ ಕೆ.ಜಿ. ಬಸವನಗೌಡ್ರು, ಶ್ರೀಮತಿ ದ್ರಾಕ್ಷಾಯಣಮ್ಮ, ಕಕ್ಕರಗೊಳ್ಳ.
ಶ್ರೀಮತಿ ಕುಸುಮ, ದಿ|| ಕೆ.ಜಿ. ಲೋಕೇಶ್ವರಪ್ಪ, ದಾವಣಗೆರೆ. ಶ್ರೀ ಕೆ. ಜಿ. ವೀರಬಸಪ್ಪ, ಶ್ರೀಮತಿ ಮಹಾಲಕ್ಷ್ಮಿ, ದಾವಣಗೆರೆ.
ಮತ್ತು ಸಹೋದರಿಯರು ಹಾಗೂ ಮಕ್ಕಳು, ಗೌಡ್ರು ಮನೆತನದವರು ಹಾಗೂ ಬಂಧು-ಮಿತ್ರರು, ಕಕ್ಕರಗೊಳ್ಳ.

ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು
ಪಟೇಲ್ ವೀರಪ್ಪ ಟ್ರಸ್ಟ್ (ರಿ.)
ಪಟೇಲ್ ವೀರಪ್ಪ ಸ್ಕೂಲ್, ಕಕ್ಕರಗೊಳ್ಳ
Spurthi Educational Trust (R) DAVAN
ಸ್ಫೂರ್ತಿ ಎಜುಕೇಷನ್ ಟ್ರಸ್ಟ್ (ರಿ.)
ದವನ್ ಕಾಲೇಜ್, ದಾವಣಗೆರೆ
Spurthi

# ಅಧಿಕಾರಿಗಳ ನಿರ್ಲಕ್ಷ್ಯ : ಸ್ಥಗಿತಗೊಂಡ ಶುದ್ಧ ನೀರಿನ ಘಟಕಗಳು

ಬಿ.ಪಿ. ಸುಭಾನ್



ಜಗಳೂರು

ಜಗಳೂರು, ಜು.21- ಪಟ್ಟಣ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅಡಿಯಲ್ಲಿ ಸ್ಥಾಪಿಸಲಾಗಿರುವ ಶುದ್ಧ ನೀರಿನ ಘಟಕಗಳು ಸಂಪೂರ್ಣವಾಗಿ ಸ್ಥಗಿತವಾಗಿದ್ದು, ಕೆಲವು ಘಟಕಗಳು ಪಾಳುಬಿದ್ದಿವೆ.

ಪಟ್ಟಣದ ವ್ಯಾಪ್ತಿಯ 4 ಕ್ಕೂ ಹೆಚ್ಚು ಶುದ್ಧ ನೀರಿನ ಘಟಕಗಳನ್ನು ಸರ್ಕಾರದ ವಿವಿಧ ಯೋಜನೆಯ ಅಡಿಯಲ್ಲಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಸ್ಥಾಪಿಸಲಾಗಿತ್ತು. ಆರಂಭವಾದ ಕೆಲವೇ ತಿಂಗಳು ಅಥವಾ ಕೆಲವೇ ದಿನಗಳಲ್ಲಿ ವಿವಿಧ ಕಾರಣಗಳಿಂದ ಸ್ಥಗಿತಗೊಂಡಿರುವ ಶುದ್ಧ ನೀರಿನ ಘಟಕಗಳಿಂದ ಜನರಿಗೆ ಯಾವುದೇ ಉಪಯೋಗವಾಗದೆ ಸರ್ಕಾರದ ಹಣ ಅಂದರೆ ಜನರ ತೆರಿಗೆಯ ಹಣ ಅಧಿಕಾ ರಿಗಳ ನಿರ್ಲಕ್ಷ್ಯದಿಂದಾಗಿ ವ್ಯರ್ಥವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಆಶಯದೊಂದಿಗೆ ಸ್ಥಾಪಿಸಲಾಗಿರುವ ಈ ಶುದ್ಧ ನೀರಿನ ಘಟಕಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಅನಿವಾರ್ಯವಾಗಿ ಖಾಸಗಿ ಶುದ್ಧ ನೀರಿನ ಘಟಕಗಳಿಂದ ನೀರನ್ನು ಕೊಂಡುಕೊಳ್ಳುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಜ್ಯ ಹಾಗೂ ಕೇಂದ್ರ ಸರಕಾರಗಳು ಜನರಿಗೆ ಶುದ್ಧ ನೀರು ಪೂರೈಸುವ ಆಶಯದೊಂದಿಗೆ ಹಲವು ಯೋಜನೆ ಗಳನ್ನು ಕಾರ್ಯರೂಪಕ್ಕೆ ತಂದಿದೆ. ಯಾವುದೇ ಯೋಜನೆ ಜನರಿಗೆ ತಲುಪಲು ಅನುಷ್ಠಾನಗೊಳಿಸುವ ಅಧಿಕಾರಿಗಳ ಜವಾಬ್ದಾರಿ ಮಹತ್ವದ್ದಾಗಿರುತ್ತದೆ. ಆದರೆ ಪಟ್ಟಣ ಪಂಚಾಯ್ತಿ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಒಂದು ಮಹತ್ವಪೂರ್ಣ ಯೋಜನೆಯು ಸಾಮಾನ್ಯ ಜನರಿಗೆ ತಲುಪದೆ ತೆರಿಗೆ ಹಣ ಪೋಲು ಆಗಿದೆ ಎಂದು ಸಾರ್ವಜನಿಕವಾಗಿ ಟೀಕೆ ವ್ಯಕ್ತವಾಗಿದೆ.

ಪಟ್ಟಣದಲ್ಲಿ ಸುಮಾರು ಹತ್ತಕ್ಕೂ ಹೆಚ್ಚು ಖಾಸಗಿ ಶುದ್ಧನೀರಿನ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಸುಮಾರು 2500 ಲೀಟರ್ ಸಾಮರ್ಥ್ಯದ ಟ್ಯಾಂಕ್ ಳೊಂದಿಗೆ ಸಾರ್ವಜನಿಕರ ಮನೆ ಬಾಗಿಲಿಗೆ ಹೆಚ್ಚಿನ ಹಣ ಪಡೆದು ಶುದ್ಧ ನೀರು ಸರಬರಾಜು ಮಾಡು ತ್ತಿದ್ದಾರೆ. ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಎಲ್ಲೂ ಇಲ್ಲ . ಆದರೂ ಸಹ ಕುಡಿಯಲು ಯೋಗ್ಯವಾದ ಶುದ್ಧ ನೀರನ್ನು ಜನರು ಖಾಸಗಿಯವರ ಘಟಕ ದಿಂದಲೇ ಹಣ ಪಾವತಿಸಿ ಪಡೆಯುತ್ತಿದ್ದಾರೆ.

ಆದರೆ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಬಡತನ ರೇಖೆಯ ಕೆಳಗಿರುವಂತಹ ಬಡ ಕುಟುಂಬಗಳ ಜನರು ಹಣ ಪಾವತಿಸಿ ಶುದ್ಧ ನೀರು ಪಡೆಯುವ ಬದಲಾಗಿ ಪಟ್ಟಣ ಪಂಚಾಯ್ತಿಯಿಂದ ಬೋರ್‌ವೆಲ್ ಗಳಿಂದ ಪೂರೈಸಲಾಗುವ ನಲ್ಲಿಯ ನೀರು ಹಾಗೂ ಶಾಂತಿ ಸಾಗರ್‌ದಿಂದ ಸರಬರಾಜು ಆಗುವ ನೀರನ್ನು ಕುಡಿಯುತ್ತಿದ್ದಾರೆ.

ಜನರಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಸರ್ಕಾರದ ಆಶಯದೊಂದಿಗೆ ಆರಂಭವಾದ ಶುದ್ಧ ನೀರಿನ ಘಟಕಗಳು ಸಂಪೂರ್ಣವಾಗಿ ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಸ್ಥಗಿತಗೊಂಡಿರುವುದು ಬಡ-ಮಧ್ಯಮ ಜನರಿಗೆ ತೊಂದರೆ ಆದಂತಾಗಿದೆ. ಪಟ್ಟಣದಲ್ಲಿ ಪ.ಪಂ. ನಿಂದ ಸ್ಥಾಪಿಸಲಾಗಿರುವ ಎಲ್ಲ ಶುದ್ಧ ನೀರಿನ ಘಟಕಗಳು ಸ್ಥಗಿತಗೊಂಡಿರುವ ಕಾರಣ ಖಾಸಗಿಯವರು ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲು ಹೆಚ್ಚು ಪ್ರೋತ್ಸಾಹ ಸಿಕ್ಕಂತಾಗಿವೆ. ಸುಮಾರು ಹತ್ತಕ್ಕೂ ಹೆಚ್ಚು ಘಟಕಗಳು ಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಸ್ಥಗಿತಗೊಂಡಿರುವ ಘಟಕಗಳು:** ವಿದ್ಯಾನಗರ ಪಾರ್ಕ್‌ನಲ್ಲಿರುವ ಘಟಕ, ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿರುವ ಘಟಕ, ಚಳ್ಳಕೆರೆ ಗೇಟ್‌ನಲ್ಲಿ ಸ್ಥಾಪಿಸಲಾಗಿರುವ ನೀರಿನ ಘಟಕ ಹಾಗೂ ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಸ್ಥಾಪಿಸಲಾಗಿರುವ ಘಟಕ.

ಈಗಾಗಲೇ ಸ್ಥಾಪಿಸಲಾಗಿರುವ ಘಟಕಗಳು ಪಾಳು ಬಿದ್ದಿದ್ದರೂ ಕೂಡ ಮತ್ತೆ 18 ಮತ್ತು 9 ನೇ ವಾರ್ಡ್‌ಗಳಲ್ಲಿ ಶುದ್ಧ ನೀರಿನ ಘಟಕಗಳ ಸ್ಥಾಪನೆಗೆ ಸಿದ್ಧತೆ ನಡೆಯುತ್ತಿದೆ. ಶೆಡ್ ನಿರ್ಮಿಸಿ ಮೂರು ತಿಂಗಳಾಗಿದ್ದು ಮಿಷನ್ ಅಳವಡಿಸಬೇಕಾಗಿದೆ.

## ಹರಪನಹಳ್ಳಿಯಲ್ಲಿ ಸರಳ ಬಕ್ರೀದ್



ಹರಪನಹಳ್ಳಿ, ಜು.21- ಕೊರೊನಾ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕಳೆದ ವರ್ಷದ ಹಾಗೆ ಈ ವರ್ಷವೂ ಸಹ ಮುಸ್ಲಿಂ ಬಾಂಧವರು ತ್ಯಾಗ, ಬಲಿದಾನಗಳ ಸಂಕೇತವಾದ ಪವಿತ್ರ ಬಕ್ರೀದ್ ಹಬ್ಬವನ್ನು ಮನೆ ಮತ್ತು ಮಸೀದಿಗಳಲ್ಲಿ ಸರಳವಾಗಿ ಆಚರಿಸಿದರು.

ಈ ವೇಳೆ ನಿವೃತ್ತ ಮುಖ್ಯ ಶಿಕ್ಷಕ ಜೆ.ಎಂ. ಸರ್ಖಾವಾಸ್ ಹಾಗೂ ಪುರಸಭೆ ಸದಸ್ಯ ಜಾಕೀರ್ ಹುಸೇನ್, ಖಾಜಿ ಮುಸ್ತಾಕ್ ಅಮ್ಜದ್ ರಜ್ವಿ ತಂಜೀಮ್ ಉಲೇಮಾ-ಹಿ-ಅಲ್ಲೇ ಸುನತ್ ಹರಪನಹಳ್ಳಿ, ಅಲ್ಪಸಂಖ್ಯಾತರ ಘಟಕದ ತಾಲ್ಲೂಕು ಅಧ್ಯಕ್ಷ ಎ. ಮೂಸಾ ಸಾಬ್ ಮಾತನಾಡಿದರು.

## ಪ್ರತಿಭಟನೆಗೆ ಮುಂದಾಗಬಾರದು

**(1ನೇ ಪುಟದಿಂದ)** ಎಂದು ಹೇಳಿದ್ದಾರೆ.

ಯಡಿಯೂರಪ್ಪ ಬದಲಾವಣೆ ಆಗುವುದಿಲ್ಲ. ಬದಲಾವಣೆ ಮಾಡಬಾರದು. ನಾನೂ ಕೂಡ ಸೋಮವಾರ ದೆಹಲಿಗೆ ಹೋಗುತ್ತೇನೆ. ಹೈಕಮಾಂಡ್ ಗಮನಕ್ಕೆ ಎಲ್ಲ ವಿಷಯ ತರುತ್ತೇನೆ ಎಂದವರು ತಿಳಿಸಿದ್ದಾರೆ.

ಯಡಿಯೂರಪ್ಪ ಅವರು ಒಳ್ಳೆಯ ಆಡಳಿತ ನೀಡಿ, ಎಲ್ಲ ಜನರ ಮೇಲೂ ಕಾಳಜಿ ಇಟ್ಟು ಕೆಲಸ ಮಾಡುತ್ತಿದ್ದಾರೆ. ವಯಸ್ಸಾದರೂ ಯುವಕರಂತೆ ಕೆಲಸ ಮಾಡುವ ಯಡಿಯೂರಪ್ಪನವರನ್ನು ಬದಲಾಯಿಸಬಾರದು. ಎಲ್ಲ ವರ್ಗದ ಸ್ವಾಮೀಜಿಗಳು, ಯಡಿಯೂರಪ್ಪ ಮುಂದುವರೆಯಬೇಕೆಂದು ಹೇಳಿದ್ದಾರೆ ಎಂದೂ ಸಿದ್ದೇಶ್ವರ ತಿಳಿಸಿದ್ದಾರೆ.

ವೈರಲ್ ಆಗಿರುವ ಆಡಿಯೋದಲ್ಲಿರುವ ಧ್ವನಿ ತಮ್ಮದಲ್ಲ ಎಂದು ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಈಗಾಗಲೇ ಹೇಳಿದ್ದಾರೆ. ಇಷ್ಟಾದರೂ ಸಹ, ಪಕ್ಷಕ್ಕೆ ಆಗದೇ ಇರುವ ಕೆಲವರು ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಪಕ್ಷದ ಇಬ್ಬರು, ಮೂವರು ಸಹ ಯಡಿಯೂರಪ್ಪನವರನ್ನು ವಿರೋಧಿಸುತ್ತಿದ್ದಾರೆ. ಆದರೆ, ಇಬ್ಬರು, ಮೂವರಿಂದ ಏನೂ ಆಗುವುದಿಲ್ಲ. ಎಲ್ಲರೂ ಯಡಿಯೂರಪ್ಪನವರನ್ನು ಬೆಂಬಲಿಸುತ್ತಿದ್ದೇವೆ ಎಂದು ಸಿದ್ದೇಶ್ವರ ಹೇಳಿದರು.

## ಕ್ಷಮೆ ಯಾಚಿಸದಿದ್ದರೆ ಇಂದ್ರಜಿತ್ ಲಂಕೇಶ್ ವಿರುದ್ಧ ಹೋರಾಟ

ದಾವಣಗೆರೆ, ಜು.21- ಚಾಲೆಂಜಿಂಗ್ ಸ್ಟಾರ್ ದರ್ಶನ್ ಮತ್ತು ಅವರ ಅಭಿಮಾನಿಗಳ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ನಿರ್ಮಾಪಕ, ಪತ್ರಕರ್ತ ಇಂದ್ರಜಿತ್ ಲಂಕೇಶ್ ಅವರು ನಾಳೆ ದಿನಾಂಕ 22 ರೊಳಗಾಗಿ ಬಹಿರಂಗವಾಗಿ ಕ್ಷಮೆ ಯಾಚಿಸದಿದ್ದರೆ ಹೋರಾಟ ನಡೆಸುವುದಾಗಿ ಅಖಿಲ ಕರ್ನಾಟಕ ದರ್ಶನ್ ತೂಗುದೀಪ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ಕೆ.ಜಿ. ಚಂದ್ರು ಎಚ್ಚರಿಸಿದ್ದಾರೆ.

ಸು ದ್ದಿ ಗೋ ಷ್ಠಿ ಯ ಲ್ಲಿ ಮಾತನಾಡಿದ ಅವರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಧ್ಯೆ ಪ್ರವೇಶಿಸಿ, ಇಂದ್ರಜಿತ್ ಅವರನ್ನು ಕರೆಯಿಸಿ ಸಮಸ್ಯೆ ಇತ್ಯರ್ಥ ಮಾಡಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಅರುಣ್ ಕುಮಾರ್, ಸುರೇಶ್, ಮಂಜು, ವರುಣ್, ಸತೀಶ್, ಅಜಯ್ ಕುಮಾರ್, ವಿಜಯಕುಮಾರ್, ವಿಕ್ಕಿ, ಯಶಸ್, ನಾಗರಾಜ್, ಮೌನೇಶ್ ಮತ್ತಿತರರಿದ್ದರು.

## ನಿವಾಸಕ್ಕೆ ಮಠಾಧೀಶರ ದಂಡು

**(1ನೇ ಪುಟದಿಂದ)** ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ಔತಣಕೂಟ ರದ್ದು ಮಾಡಿದ್ದಾರೆ ಎನ್ನಲಾಗುತ್ತಿದೆ.

ಜುಲೈ 26ಕ್ಕೆ ಎರಡು ವರ್ಷಗಳ ಅವಧಿ ಪೂರ್ಣಗೊಳಿಸುವ ಯಡಿಯೂರಪ್ಪನವರು ಅಂದೇ ತಮ್ಮ ಸ್ಥಾನವನ್ನು ತ್ಯಜಿಸಲಿದ್ದಾರೆ ಎಂಬ ಮಾಹಿತಿ ದಟ್ಟವಾಗಿ ಕೇಳಿಬರುತ್ತಿದೆ.

ಯಡಿಯೂರಪ್ಪ ರಾಜೀನಾಮೆ ನೀಡಿದ ನಂತರ ಹೊಸ ನಾಯಕನ ಆಯ್ಕೆ 28 ರಂದೇ ನಡೆಯಬಹುದೆಂದು ಹೇಳಲಾಗಿದೆ. ಇದಕ್ಕಾಗಿ ಶಾಸಕಾಂಗ ಪಕ್ಷದ ಸಭೆ ಕರೆಯಲು ತೀರ್ಮಾನಿಸಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ದೆಹಲಿಯಲ್ಲೇ ಬಿಡಾರ ಹೂಡಿರುವ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರನ್ನು ಕೇಂದ್ರ ಗೃಹ ಸಚಿವ ಅಮಿತ್ ಷಾ ತಮ್ಮ ನಿವಾಸಕ್ಕೆ ಕರೆಸಿಕೊಂಡು ಸಮಾಲೋಚನೆ ನಡೆಸುತ್ತಿರುವುದು, ಈ ಎಲ್ಲಾ ಊಹಾಪೋಹಗಳನ್ನು ಗಟ್ಟಿ ಮಾಡಿದಂತಿದೆ.

ಯಡಿಯೂರಪ್ಪ ಬೆಂಬಲಿಗ ಸಚಿವ, ಶಾಸಕರಲ್ಲೂ ಗೊಂದಲವಿದೆ. ನಾಯಕತ್ವ ಬದಲಾವಣೆ ಖಚಿತ. ಆದರೆ ಎಂದು ಎಂಬ ಮಾಹಿತಿ ಸ್ಪಷ್ಟವಿಲ್ಲ. ಮುಂದೆ ಯಾರು ಆಗುತ್ತಾರೆ ಎಂಬ ಬಗ್ಗೆ ನಿಖರ ಮಾಹಿತಿ ಇಲ್ಲ.

ಕೆಲವು ಸಚಿವರಂತೂ ಮುಂದೆ ತಮಗೆ ಅಧಿಕಾರ ದೊರೆಯಲಿದೆಯೇ ಇಲ್ಲವೆ ಎಂಬುದರ ಬಗ್ಗೆ ಯೋಚನೆ ಆರಂಭವಾಗಿದೆ. ಹೀಗಾಗಿ ಸಚಿವರು ಸಭೆಗಳನ್ನು ಪ್ರತ್ಯೇಕವಾಗಿ ನಡೆಸುತ್ತಿದ್ದಾರೆ.

## ಯಡಿಯೂರಪ್ಪ ಅವಧಿ ಪೂರೈಸಲಿ

**(1ನೇ ಪುಟದಿಂದ)** ಎಂದು ಹೇಳಿದ್ದಾರೆ. ನಾಯಕತ್ವ ಬದಲಾವಣೆ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ನಮ್ಮ ಇಚ್ಛೆ ಏನೆಂದರೆ ಅವಧಿ ಪೂರೈಸುವವರೆಗೆ ಯಡಿ ಯೂರಪ್ಪನವರನ್ನು ಮುಂದುವರೆಸಬೇಕೆಂಬುದಷ್ಟೇ ನಮ್ಮ ಆಶಯ ಎಂದರು. ಮತ್ತೊಂದೆಡೆ ಕೊಳದ ಮಠದ ಡಾ.ಶಾಂತವೀರ ಸ್ವಾಮೀಜಿ ಸುದ್ದಿಗೋಷ್ಠಿ ನಡೆಸಿ, ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಮಾಡಲು ಬಿಜೆಪಿ ಹೈಕಮಾಂಡ್ ನಿರ್ಧರಿಸಿದರೆ, ವೀರಶೈವ ನಾಯಕರೇ ಮುಖ್ಯಮಂತ್ರಿಯಾಗಬೇಕು ಎಂದು ಒತ್ತಾಯಿಸಿದರು.

ಇಲ್ಲವಾದಲ್ಲಿ ಬಿಜೆಪಿ ನಾಯಕರು ಭಾರೀ ಬೆಲೆ ತೆರಬೇಕಾಗುತ್ತದೆ. ನಾವು ಯಾವುದೇ ವ್ಯಕ್ತಿ ಪರವಿಲ್ಲ. ವೀರಶೈವ ಸಮುದಾಯದ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ನಮ್ಮ ಸಮುದಾಯದ ನಾಯಕರಿಗೆ ಅವಕಾಶ ನೀಡಬೇಕು. ಅರವಿಂದ ಬೆಲ್ಲದ್ ಆದರೂ ಸರಿ ಬೇರೆ ಯಾರಾದರೂ ಸರಿ ಒಟ್ಟಾರೆ ವೀರಶೈವರಿಗೆ ಅವಕಾಶ ಸಿಗಬೇಕೆಂಬುದು ನಮ್ಮ ಆಗ್ರಹ ಎಂದರು.

ಸಾಣೇಹಳ್ಳಿ ತರಳಬಾಳು ಮಠದ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಬಿಜೆಪಿ ವರಿಷ್ಠರು ಯಾವುದೇ ಕಾರಣಕ್ಕೂ ಯಡಿಯೂರಪ್ಪ ಬದಲಾವಣೆ ಮಾಡಬಾರದು. ಉಳಿದ ಎರಡು ವರ್ಷ ಅಧಿಕಾರ ಪೂರ್ಣಗೊಳಿಸಲು ಅವಕಾಶ ನೀಡಬೇಕು. ಇಲ್ಲವಾದಲ್ಲಿ ಪಕ್ಷಕ್ಕೆ ಹಾನಿಯಾಗಲಿದೆ. ಇದನ್ನು ಬಿಜೆಪಿ ನಾಯಕರು ಗಂಭೀರವಾಗಿ ಪರಿಗಣಿಸಲು ಆಗ್ರಹಿಸಿದ್ದಾರೆ.

## ಕೆಲಸ ಮಾಡಲು ಅವಕಾಶ ನೀಡಿ

**(1ನೇ ಪುಟದಿಂದ)** ಸ್ವಾತಂತ್ರ್ಯವಿದ್ದಾಗ ಮಾತ್ರ ಮುಖ್ಯಮಂತ್ರಿ ಉತ್ತಮ ಆಡಳಿತ ಕೊಡಲು ಸಾಧ್ಯ.

ಕೇಂದ್ರ ಸರ್ಕಾರವು ಮತ್ತೆ ಮತ್ತೆ ರಾಜ್ಯ ಸರ್ಕಾರಗಳ ಮೇಲೆ ಹತೋಟಿ ಸಾಧಿಸುವ ಸಂಚು ಮಾಡಿದರೆ ಎಂತಹ ಮುಖ್ಯಮಂತ್ರಿ ಇದ್ದರೂ ಪರಿಪೂರ್ಣ ಆಡಳಿತ ಕೊಡಲು ಸಾಧ್ಯವಿಲ್ಲ. ಯಡಿಯೂರಪ್ಪನವರ ವಿಚಾರದಲ್ಲೂ ಇದೇ ಆಗಿದೆ ಎಂದರು.

ಒಳ್ಳೆಯ ಆಡಳಿತ ಕೊಡಬೇಕೆಂದರೆ ಎಲ್ಲರ ಸಹಕಾರವೂ ಇರಬೇಕು. ಜೊತೆಗೆ ಆ ವ್ಯಕ್ತಿ ಯಾವುದೇ ಪಕ್ಷದವನಾಗಿರಲಿ ಕೊನೆ ಪಕ್ಷ ಐದು ವರ್ಷ ಆ ಸ್ಥಾನದಲ್ಲಿ ಮುಂದುವರೆದರೆ ಮಾತ್ರ ಒಳ್ಳೆಯ ಕಾರ್ಯಗಳನ್ನು ಮಾಡಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಜನಪ್ರತಿನಿಧಿಗಳು ಮುಖ್ಯಮಂತ್ರಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಉತ್ತಮ ಆಡಳಿತ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು ಎಂದು ಶ್ರೀಗಳು ವೀಡಿಯೋ ಸಂದೇಶದಲ್ಲಿ ಹೇಳಿದ್ದಾರೆ.

## ಮಠಾಧೀಶರ ಮಧ್ಯಪ್ರವೇಶ ಸಲ್ಲದು

**(1ನೇ ಪುಟದಿಂದ)** ಯಡಿಯೂರಪ್ಪ ಅವರನ್ನು ಬೆಂಬಲಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್ ಪಕ್ಷಕ್ಕೆ ಅವರು ರಾಜೀನಾಮೆ ನೀಡಿ ಬಿಜೆಪಿ ಸೇರಿ ಆನಂತರ ಈ ಮಾತು ಹೇಳಿದರೆ ಒಪ್ಪಿಕೊಳ್ಳುತ್ತೇನೆ ಎಂದರು.

ಕಾಂಗ್ರೆಸ್‌ನಲ್ಲಿ ಇದ್ದು ವೀರಶೈವ ಅಂದರೆ ಹೇಗೆ? ಯಡಿಯೂರಪ್ಪ ಅಧಿಕಾರಕ್ಕೆ ಬರುವ ಮುಂಚೆ ಅವರಿಗೆ ಬೆಂಬಲಿಸಬೇಕಿತ್ತು. ಆದರೆ, ಇಂತಹ ಸಂದರ್ಭದಲ್ಲಿ ಈ ರೀತಿಯ ಹೇಳಿಕೆ ನೀಡಬಾರದು. ಬೇರೆ ಪಕ್ಷದಲ್ಲಿ ಇದ್ದುಕೊಂಡು ಬೆಂಬಲಿಸುತ್ತೇವೆ ಅನ್ನುವುದು ನ್ಯಾಯಯುತವಲ್ಲ ಎಂದು ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಕುರಿತ ಪ್ರಶ್ನೆಗೆ ಉತ್ತರಿಸಿದ ರವೀಂದ್ರನಾಥ್, ಪಕ್ಷದ ವರಿಷ್ಠರ ತೀರ್ಮಾನ ಒಪ್ಪಿಕೊಳ್ಳುತ್ತೇನೆ ಎಂದು ಯಡಿಯೂರಪ್ಪ ಅವರೇ ಹೇಳಿದ್ದಾರೆ. ನಾನೂ ಸಹ ವರಿಷ್ಠರ ತೀರ್ಮಾನ ಒಪ್ಪಿಕೊಳ್ಳುತ್ತೇನೆ ಎಂದು ತಿಳಿಸಿದರು.

## ಎಸ್ಸೆಸ್ ಬೆಂಬಲ : ಸಿದ್ದೇಶ್ವರ ಆಕ್ಷೇಪ

**(1ನೇ ಪುಟದಿಂದ)** ಎಂದು ಪ್ರಶ್ನಿಸಿರುವ ಸಿದ್ದೇಶ್ವರ, ಆ ಸಂದರ್ಭದಲ್ಲಿ ನಾವೇ ಶಾಮನೂರು ಶಿವಶಂಕರಪ್ಪ ನವರನ್ನು ಕರೆದಿದ್ದೆವು. ಆಗ ಯಾಕೆ ಬರಲಿಲ್ಲ ? ಎಂದೂ ಕೇಳಿದ್ದಾರೆ.

## ಕಾಲೇಜು ವಿದ್ಯಾರ್ಥಿಗಳಿಗೆ ಲಸಿಕೆ

**(1ನೇ ಪುಟದಿಂದ)** ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 18 ವರ್ಷಕ್ಕೂ ಮೇಲ್ಪಟ್ಟ ಎಲ್ಲ ವಿದ್ಯಾರ್ಥಿಗಳಿಗೆ ಲಸಿಕೆ ಕೊಡಲಾಗುತ್ತಿದೆ. ಜತೆಗೆ ಬೋಧಕರು, ಬೋಧಕೇತರ ಸಿಬ್ಬಂದಿಗೂ ವ್ಯಾಕ್ಸಿನ್ ನೀಡಲಾಗುತ್ತಿದೆ ಎಂದರು. ಲಭ್ಯವಾಗುತ್ತಿರುವ ಲಸಿಕೆಯನ್ನು ನ್ಯಾಯೋಚಿತವಾಗಿ ಎಲ್ಲರಿಗೂ ಹಂಚಿ ನೀಡಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿಗಳು, ಭೌತಿಕ ತರಗತಿಗಳಿಗೆ ಹಾಜರಾಗಬಯಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಮೊದಲ ಡೋಸ್ ಲಸಿಕೆ ಪಡೆದಿರಲೇಬೇಕು ಎಂದರು.

## ಶ್ರದ್ಧಾ-ಭಕ್ತಿ ಬಕ್ರೀದ್ ಆಚರಣೆ

**(1ನೇ ಪುಟದಿಂದ)** ಸೀರಿಯಲ್ ನಾಯಕಿಯರ ಡಿಸೈನ್ ಬಟ್ಟೆಗಳು, ಚಪ್ಪಲಿ, ಬಳೆಗಳು ಸೇರಿದಂತೆ ಇನ್ನು ಅನೇಕ ವಸ್ತುಗಳ ಖರೀದಿ ಜೋರಾಗಿತ್ತು.

ಬಹುತೇಕರಿಗೆ ಇದರ ಮಾಹಿತಿ ಲಭ್ಯವಾಗದ ಕಾರಣ ಮಾರಾಟಗಾರರು ತಂದ ಐಟಂಗಳು ಉಳಿಯಬಾರದೆಂಬ ಉದ್ದೇಶದಿಂದ ಕಡಿಮೆ ಬೆಲೆಗೆ ಮಾರಾಟ ಮಾಡಿ 'ರಸ್ತೆ ಕಾ ಮಾಲ್ ಸಸ್ತೆ ಮೇ' ಎಂದು ಘೋಷಣೆ ಹಾಕಿದ ದೃಶ್ಯಗಳು ಸಾಮಾನ್ಯವಾಗಿದ್ದವು. ಬಡವರಿಗೆ ವರದಾನವಾಗಿದ್ದ ಈ ಮೀನಾ ಬಜಾರ್ ನ ರಂಗು ಬಕ್ರೀದ್ ಹಬ್ಬದ ಬಹಾರ್ ಆಗಿ ಪರಿಣಮಿಸಿತು.

### ರಂಜಾನ್ ಖರ್ಚು ಬಕ್ರೀದ್‌ಗೆ ಬಿತ್ತು !

**ರಂಜಾನ್ ತಿಂಗಳಲ್ಲಿ ದೇಶಾದ್ಯಂತ ಲಾಕ್‌ಡೌನ್ ಇದ್ದ ಕಾರಣ ಮನೆಯಲ್ಲಿಯೇ ಪ್ರಾರ್ಥನೆ ಸಲ್ಲಿಸಿದ ಮುಸ್ಲಿಂ ಬಾಂಧವರು ಹೊಸ ಬಟ್ಟೆ ಖರೀದಿಸಲು ಸಹ ಅವಕಾಶ ಸಿಕ್ಕಿಲ್ಲ. ಹೀಗಾಗಿ ರಂಜಾನ್ ತಿಂಗಳಲ್ಲಿ ಮಾಡ ಬೇಕಾದ ಹಬ್ಬದ ಖುಷಿಯ ಖರ್ಚು ಉಳಿತಾಯ ಆಗಿದ್ದರೂ ಬಕ್ರೀದ್ ಹಬ್ಬಕ್ಕೆ ಡಬಲ್ ಖರ್ಚು ಆಯ್ತು ಎಂದು ತಮ್ಮ ಅನುಭವ ಹಂಚಿ ಕೊಂಡ ಮುಸ್ಲಿಂ ಮುಖಂಡರೊಬ್ಬರು, ಒಟ್ಟಾಗಿ ಏನೇ ಆಗಲಿ ಸುಖ, ಶಾಂತಿಯಿಂದ ಬಕ್ರೀದ್ ನಮಾಜ್ ಸಲ್ಲಿಸಲು ಭಗವಂತನು ಕೃಪೆ ತೋರಿದ್ದಾನೆ ಎಂದರು.**


# ಕೆ.ಸಿ. ಕಾಂತರಾಜ್ ನಿಧನ



ದಾವಣಗೆರೆ ವಸಂತ ರಸ್ತೆ, ಬಾರ್‌ಲೈನ್ ರೋಡ್ ಛಲವಾದಿಕೇರಿ ವಾಸಿ,
ದಾವಣಗೆರೆ ಉಪವಿಭಾಗಾಧಿಕಾರಿಗಳ ಕಚೇರಿಯ ನಿವೃತ್ತ ನೌಕರರೂ ಮತ್ತು
ಪತ್ರಿಕಾ ವಿತರಕರಾದ ಶ್ರೀ ಕೆ. ಅರುಣ್‌ಕುಮಾರ್ ಅವರ ತಂದೆಯವರೂ ಆದ

**ಶ್ರೀ ಕೆ.ಸಿ. ಕಾಂತರಾಜ್** ಅವರು

ದಿನಾಂಕ 21.07.2021ರ ಬುಧವಾರ ಸಂಜೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 64 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22.07.2021ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಕತ್ತಲಗೆರೆ ವಂಶಸ್ಥರು, ಮೊ. : 99160 92999, 99868 49991**

## ಶ್ರೀಮತಿ ಪ್ರಮೀಳಮ್ಮ ನಿಧನ



ದಾವಣಗೆರೆ ಸ್ವಾಮಿ ವಿವೇಕಾನಂದ ಬಡಾವಣೆ 7ನೇ ಮೇನ್, ಮಹೇಶ್ ಪಿಯು ಕಾಲೇಜ್ ಹಿಂಭಾಗದ (# 3052/3) 'ಬಸವಪ್ರೇಮ' ವಾಸಿ ದಿ॥ ಬಸವರಾಜಪ್ಪ ವೀರಪ್ಪ ಗೋಕಾವಿ ಅವರ ಧರ್ಮಪತ್ನಿ **ಶ್ರೀಮತಿ ಪ್ರಮೀಳಮ್ಮ** (78 ವರ್ಷ) ಅವರು ದಿನಾಂಕ 21.7.2021ರ ಬುಧವಾರ ರಾತ್ರಿ 8 ಗಂಟೆಗೆ ನಿಧನರಾದರು. ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.7.2021ರ ಗುರುವಾರ ಸಂಜೆ 4 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**
**ಮೊ. : 94484 42814, 94812 48160**


॥ ಶ್ರೀ ಬನಶಂಕರಿ ಪ್ರಸನ್ನ ॥ ॥ ಶಿವ ॥ ॥ ಶ್ರೀ ಆಂಜನೇಯ ಪ್ರಸನ್ನ ॥



## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾಲ್ಲೂಕು ತೋಟದ ಚಿಕ್ಕನಹಳ್ಳಿ ಗ್ರಾಮದ ವಾಸಿ
**ದಿ॥ ಶ್ರೀ ಕಾಡಜ್ಜಿ ನಿಂಗಪ್ಪನವರ ಮಗನಾದ ಶ್ರೀ ಸಿ. ಎನ್. ಗುರುಸಿದ್ದಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 14-7-2021 ನೇ ಬುಧವಾರ ಬೆಳಗಿನ ಜಾವ 3-20 ಕ್ಕೆ ನನ್ನ ಅಣ್ಣನವರಾದ



**ಶರಣ ಸಿ. ಎನ್. ಚನ್ನಬಸಪ್ಪನವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು**
**ದಿನಾಂಕ: 22-7-2021 ನೇ ಗುರುವಾರ ಬೆಳಿಗ್ಗೆ 10-30 ಗಂಟೆಗೆ**
**ತೋಟದ ಚಿಕ್ಕನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು :**

✦ ಮೃತರ ಮಕ್ಕಳಾದ : ಶ್ರೀ ಸಿ. ಜಗದೀಶ್, ಶ್ರೀಮತಿ ಜಿ. ಎಂ. ಸುವರ್ಣ ಮತ್ತು ಮಕ್ಕಳು
✦ ಶ್ರೀ ಸಿ. ಮಹಾದೇವಪ್ಪ, ಶ್ರೀಮತಿ ಎಸ್. ಸುನೀತ ಮತ್ತು ಮಕ್ಕಳು
✦ ಶ್ರೀಮತಿ ಲಲಿತಮ್ಮ, ಶ್ರೀ ಮಹೇಶ್ವರಪ್ಪ ಮತ್ತು ಮಕ್ಕಳು, ಗ್ಯಾರಹಳ್ಳಿ
✦ ಶ್ರೀಮತಿ ನಿರ್ಮಲ, ಶ್ರೀ ಜಿ.ಎಂ. ವಿರೂಪಾಕ್ಷಪ್ಪ ಮತ್ತು ಮಕ್ಕಳು, ದಾವಣಗೆರೆ.
✦ ಶ್ರೀಮತಿ ಸುಲೋಚನಮ್ಮ, ಸಿ.ಎನ್. ಗುರುಸಿದ್ದಪ್ಪ ಮತ್ತು ಮಕ್ಕಳು, ಫುಡ್‌ಮಾರ್ಟ್, ದಾವಣಗೆರೆ.
✦ ದಿ॥ ಸಿ.ಎನ್. ಶಂಕ್ರಪ್ಪ, ಶ್ರೀಮತಿ ಸುಮಂಗಲಮ್ಮ ಮತ್ತು ಮಕ್ಕಳು
✦ ದಿ॥ ಗುರುಲಿಂಗಪ್ಪ ಮತ್ತು ದಿ॥ ಶ್ರೀಮತಿ ರುದ್ರಮ್ಮನವರ ಮಕ್ಕಳು
✦ ಶ್ರೀ ಕೆ.ಪಿ. ಮಹೇಶ್ವರಪ್ಪ ಮತ್ತು ಸಹೋದರರು ✦ ಶ್ರೀ ಸಿ.ಜಿ. ಮಹಾದೇವಪ್ಪ ಮತ್ತು ಸಹೋದರರು
✦ ಶ್ರೀ ಡಿ. ಉಮಾಪತಿ (ಹನುಮಂತಪ್ಪ) ಮತ್ತು ಸಹೋದರರು
✦ ಶ್ರೀ ಹಲಗೇರಿ ಶೇಖರಪ್ಪ, ಶ್ರೀಮತಿ ನಾಗಮ್ಮ ಮತ್ತು ಮಕ್ಕಳು, ಮಾಕನೂರು.
✦ ಕಾಡಜ್ಜಿ ವಂಶಸ್ಥರು, ತೋಟದ ಚಿಕ್ಕನಹಳ್ಳಿ ಹಾಗೂ ಹೊಸಚಿಕ್ಕನಹಳ್ಳಿ ಹಾಗೂ ಬಂಧು-ಮಿತ್ರರು.
ಮೊ. : 90190 08993, 79961 41067


## ಕೋಟಿ ರೂ. ಬಿಡುಗಡೆ

**(1ನೇ ಪುಟದಿಂದ)** ಮನವಿ ಪತ್ರದಲ್ಲಿ ಕೇಳಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಮತ್ತಿತರರು ಹಾಜರಿದ್ದರು.


### ಶಿವಳ್ಳಿ ಶಿವಪ್ಪ ನಿಧನ (ನಿವೃತ್ತ ಪೌರ ಕಾರ್ಮಿಕರು)



ದಾವಣಗೆರೆ ಸಿಟಿ ಗಾಂಧಿನಗರ 5ನೇ ಕ್ರಾಸ್ ವಾಸಿ, ನಿವೃತ್ತ ಪೌರ ಕಾರ್ಮಿಕರಾದ ಶಿವಳ್ಳಿ ಶಿವಪ್ಪ (85) ಅವರು ದಿನಾಂಕ 21.07.2021 ರ ಬುಧವಾರ ಬೆಳಿಗ್ಗೆ 11 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.07.2021ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

### ವಿಶಾಲಕ್ಷಮ್ಮ ಎಸ್. ಕಡ್ಲೆಗೊಂದಿ ನಿಧನ



ದಾವಣಗೆರೆ ತರಳಬಾಳು ಬಡಾವಣೆ ಐಟಿಐ ಕಾಲೇಜ್ ಎದುರು ವಾಸಿ ದಿ.ಶಿವಪ್ಪ ಕಡ್ಲೆಗೊಂದಿ ಇವರ ಪತ್ನಿ ವಿಶಾಲಕ್ಷಮ್ಮ ಎಸ್. ಕಡ್ಲೆಗೊಂದಿ (72) ಇವರು ದಿನಾಂಕ 21.07.2021 ರ ಬುಧವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.07.2021 ರ ಗುರುವಾರ ಬೆಳಗ್ಗೆ 10 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

# ಶಿಕ್ಷಣ ಇಲಾಖೆಯ ವೈರುಧ್ಯಗಳಿಂದ ನಲುಗಿದ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು

ಕೊರೊನಾ ಕಾರಣದಿಂದಾಗಿ ಮಕ್ಕಳ ಶಿಕ್ಷಣದ ಮೇಲೆ ಗದಾಪ್ರಹಾರವಾಗಿದೆ. ಹರಸಾಹಸ ಪಟ್ಟು ತಾಂತ್ರಿಕ ಸಲಕರಣೆಗಳ ಮೂಲಕ ಮಕ್ಕಳಿಗೆ ನಿರಂತರ ಕಲಿಕೆಯಲ್ಲಿ ಪ್ರಾಮಾಣಿಕವಾಗಿ ತೊಡಗಿರುವ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಸರ್ಕಾರ ಮತ್ತು ಶಿಕ್ಷಣ ಇಲಾಖೆಯ ಚಿತ್ರ-ವಿಚಿತ್ರ ತಾರ್ಕಿಕವಲ್ಲದ ನಿಯಮಾವಳಿಗಳಿಂದ ನಲುಗಿ ವಿನಾಶದಂಚಿಗೆ ತಲುಪುತ್ತಿವೆ.

**1) ಪಾಠ ಮಾಡಿ ಫೀ ಕೇಳಬೇಡಿ:** ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ನಡೆಯುತ್ತಿರುವುದೇ ಪಾಲಕರು ಕಟ್ಟುವ ಶುಲ್ಕದ ಆಧಾರದಿಂದ. ಯಾವ ಶಾಲೆಯಲ್ಲಿ ಮಗು ಓದಬೇಕೆಂಬ ಆಯ್ಕೆ ಪಾಲಕರದ್ದು. ದಾಖಲಾತಿ ಪಡೆಯುವಾಗ ಸಂಸ್ಥೆಯ ಶುಲ್ಕ ವಿವರಣೆ - ನಿಯಮಗಳನ್ನು ಒಪ್ಪಿ ಪ್ರವೇಶ ಪಡೆದಿರುತ್ತಾರೆ. ವೆಚ್ಚ ಭರಿಸಲು ಸಾಧ್ಯವಾಗದಿದ್ದಲ್ಲಿ ಪಾಲಕರು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಶುಲ್ಕ ನಿಗದಿ ಬಗ್ಗೆ ಸರ್ಕಾರದ ಹಸ್ತಕ್ಷೇಪ ಸಲ್ಲದು. ಕಳೆದ ವರ್ಷವಿಡೀ ಶುಲ್ಕ ನಿಗದಿಯ ವಿಚಾರ ನೆನೆಗುದಿಗೆ ಬಿದ್ದು ಫೀ ಕಟ್ಟಲು ಸಮರ್ಥರಿರುವ ಪಾಲಕರೂ ಸರ್ಕಾರದ ಉಳಿತಾಯ ಯೋಜನೆಗೆ ಕಾದು ಕುಳಿತರು. ಯಾವುದೂ ತೀರ್ಮಾನವಾಗದಿದ್ದಾಗ ಹಲವಾರು ಶಿಕ್ಷಣ ಸಂಸ್ಥೆಗಳು ಶುಲ್ಕ ರಿಯಾಯಿತಿ ಮಾಡಿ ಪಾಲಕರ ನೆರವಿಗೆ ಧಾವಿಸಿದರು. ಇದಕ್ಕೆ ಪಾಲಕರೂ ಕೃತಜ್ಞತೆ ತೋರಿದರು. ಆದರೂ ಮಾಧ್ಯಮದಲ್ಲಿ ದಂಧೆಕೋರರು, ಧನ ದಾಹಿಗಳು, ದರೋಡೆಕೋರರು ಎಂದು ಅತ್ಯಂತ ಹೀನಾಯವಾಗಿ ಶಿಕ್ಷಣ ಸಂಸ್ಥೆಗಳನ್ನು ಪ್ರತಿಬಿಂಬಿಸಲಾಯಿತು.

ವಿದ್ಯುತ್ ಬಿಲ್ ಕಟ್ಟದಿದ್ದಾಗ ವಿದ್ಯುತ್ ಕಡಿತಗೊಳಿಸಿದರೆ ಉಸಿರೆತ್ತದವರು ಶಾಲಾ ಶುಲ್ಕ ಪಾವತಿಗೆ ಮಾತ್ರ ಬೊಬ್ಬೆ ಹೊಡೆದರು. ಇದು ಹೇಗಿದೆ ಎಂದರೆ ಭೋಜನ ಮಾಡಿದ ನಂತರ ಹೋಟೇಲ್‌ನವರು ಬಿಲ್ ಕೊಟ್ಟಾಗ ಹಣ ಕೊಡುವುದಿಲ್ಲ ಎಂದು ಮೊಂಡಾಟ ಮಾಡಿದಂತಿದೆ. ಮೂಲಭೂತ ಸೌಕರ್ಯಕ್ಕೆ ಅನುಗುಣವಾಗಿ ಶುಲ್ಕವಿರುತ್ತದೆ. ಫೀ ಹೆಚ್ಚಳ ಮಾಡಬೇಡಿರೆಂದರು. ಸರಿ ಆದರೆ ಫೀ ಕಟ್ಟದಿದ್ದರೂ ಮಕ್ಕಳನ್ನು ಉತ್ತೀರ್ಣಗೊಳಿಸಿ. ಮುಂದಿನ ತರಗತಿಗೆ ದಾಖಲೆ ಮಾಡಿಕೊಳ್ಳಿ ಎಂಬುದು ಸರಿಯಲ್ಲ.

**2) ದಾಖಲೆ ಮಾಡಿಕೊಳ್ಳಿ... ಇಲ್ಲದಿದ್ದರೆ ಮಾನ್ಯತೆ ರದ್ದು :** ಮಾನ್ಯತೆ ಎಂಬುದು ಶಿಕ್ಷಣ ಇಲಾಖೆಯವರು ಈ ಸಂಸ್ಥೆಗಳ ಮೇಲೆ ಆಗಾಗ ಪ್ರಯೋಗಿಸುವ ಅಸ್ತ್ರ. ಆಗಸ್ಟ್ 30 ದಾಖಲಾತಿಗೆ ಕೊನೆಯ ದಿನಾಂಕ ಎಂದು ನಿಗದಿಪಡಿಸಿದ್ದರೂ. 20.07.2021 ರೊಳಗೆ ಮಕ್ಕಳನ್ನು ಮುಂದಿನ ತರಗತಿಗೆ ದಾಖಲಾತಿ ಮಾಡಿ ಎಂಬುದು ಯಾವ ನ್ಯಾಯ? ನಿಗದಿತ ಅವಧಿಗಿಂತ ಮೊದಲೇ ತಮ್ಮ ಅಧಿಕಾರ ಚಲಾಯಿಸುವವರು ಹೇಳಿದ ಹಾಗೆ ಕೇಳದಿದ್ದರೆ "ಮಾನ್ಯತೆ ರದ್ದು" ಎಂಬ ಬ್ರಹ್ಮಾಸ್ತ್ರ ಪ್ರಯೋಗಿಸುತ್ತಿದ್ದಾರೆ. ಫೀ ಕಟ್ಟಲು ಒತ್ತಾಯಿಸಬೇಡಿ ಎಂದರೆ ಯಾರು ಕಟ್ಟುತ್ತಾರೆ? ಬಸ್ಸಿನಲ್ಲಿ ಬೇಕಾದವರು ಮಾತ್ರ ಟಿಕೆಟ್ ತೆಗೆದುಕೊಳ್ಳಿ ಎಂದರೆ ಯಾರೂ ತೆಗೆದುಕೊಳ್ಳುವುದಿಲ್ಲ. ಅಲ್ಲಿಲ್ಲದ ನ್ಯಾಯ ಇಲ್ಲೇಕೆ? ವರ್ಷವಿಡೀ ಪಾಠ ಕೇಳಿದ ಮಕ್ಕಳ ವರ್ಗಾವಣೆ ಪತ್ರಕ್ಕೆ, ಅಂಕಪಟ್ಟಿಗೆ, ಕೊನೆಗೆ ಹಾಲ್‌ಟಿಕೆಟ್ ಪಡೆಯುವಾಗ ಪಾಲಕರ ಮೇಲೆ ಫೀ ಗೆ ಒತ್ತಡ ಹೇರಬೇಡಿ. ಒತ್ತಾಯಿಸಿದರೆ ಮಾನ್ಯತೆ ರದ್ದು ಎಂಬ ಅತಾರ್ಕಿಕ ಹೇಳಿಕೆ ನಿಲ್ಲಬೇಕು. ಇದರಿಂದ ಅವಕಾಶವಾದಿಗಳಿಗೆ ಉತ್ತೇಜನ ನೀಡಿದಂತಾಗುತ್ತದೆ.

**3) ಆರ್‌ಟಿಇ ಎಂಬ ಭೂತ:** ಅಧಿಕಾರಿಗಳು ಪರಿವೀಕ್ಷಣೆಗೆ ಬಂದಾಗ ಆರ್‌ಟಿಇ ಬಗ್ಗೆ ಹೇಳುತ್ತಾರೆ. ನಿಜ. ದೇಶದ ಪ್ರತಿ ಮಗುವಿಗೆ 6 ರಿಂದ 14 ವರ್ಷದವರಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದಿದೆ, ಆದರೆ ಈ ಮೂಲಭೂತ ಹಕ್ಕನ್ನು ಪೂರೈಸಲಾಗದ ಸರ್ಕಾರ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ತರಗತಿಯ ಒಟ್ಟು ದಾಖಲಾತಿಗೆ ಶೇಕಡ 25 ರಷ್ಟು ಆರ್‌ಟಿಇ ಸೀಟುಗಳನ್ನು ನಿಗದಿಪಡಿಸಿ ಈ ಮಕ್ಕಳ ಶಿಕ್ಷಣದ ವೆಚ್ಚ ಭರಿಸುತ್ತದೆಂದು ಹೇಳಿತು. ಖಾಸಗಿ ಸಂಸ್ಥೆಗಳಿಗೆ ಪ್ರತಿವರ್ಷ ಶೇಕಡ 25 ರಂತೆ ನೂರಾರು ಮಕ್ಕಳು ಪ್ರವೇಶ ಪಡೆದರು. ಇವರ ಶುಲ್ಕ ಪಾವತಿಗೆ ಒಂದು ನಿಗದಿತ ಸಮಯವಿಲ್ಲ. ಈ ವರ್ಷದ ಶುಲ್ಕ ಮುಂದಿನ ವರ್ಷ. ಹೀಗೇ ವರ್ಷ ವರ್ಷವೂ ಸಾಗುತ್ತಿದೆ. ಆರ್‌ಟಿಇ ಹೆಸರು ಹೇಳಿಕೊಂಡು ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಅಬ್ಬರಿಸುವವರ ಮೌಢ್ಯ ಹಾಸ್ಯಾಸ್ಪದ. ಒಂದೆರಡು ತಿಂಗಳು ಸಂಬಳ ಬರುವುದು ತಡವಾದರೆ ಅರ್ಭಟಿಸುವ ಸರ್ಕಾರಿ ನೌಕರರು ನೂರಾರು ವಿದ್ಯಾರ್ಥಿಗಳ ಶುಲ್ಕ ಸಮಯಕ್ಕೆ ಸರಿಯಾಗಿ ಪಾವತಿಯಾಗದಿದ್ದರೆ ಯಾರನ್ನು ಕೇಳಬೇಕು ಎಂಬುದನ್ನು ಸ್ಪಷ್ಟೀಕರಿಸಬೇಕು.

**4) ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅಗೌರವ:** ಒಂದು ದೇಶ ಸುಶಿಕ್ಷಿತವಾದರೆ ಅದು ಸದೃಢವಾಗಿ ಬೆಳೆಯುತ್ತದೆ. ಇಡೀ ವಿಶ್ವ ಇಂದು ಭಾರತದತ್ತ ಅಚ್ಚರಿಯಿಂದ ನೋಡುತ್ತಿದೆ. ಶಿಕ್ಷಣ ಸಂಸ್ಥೆಗಳ ಕೊಡುಗೆ ಅಪಾರವಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಗಟ್ಟಿಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಕೊಡುಗೆ ಗಣನೀಯ. ಪ್ರಾಮಾಣಿಕತೆಯಿಂದ, ಸೇವಾ ಭಾವನೆಯಿಂದ ಕಾರ್ಯನಿರತವಾಗಿರುವ ಶಿಕ್ಷಣ ಸಂಸ್ಥೆಗಳು ಅನೇಕ ಇವೆ. ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗುವುದು ಸಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳ ಸೇವೆಯನ್ನು ಗೌರವಿಸಿ. "ದಂಧೆಕೋರರು" ಎಂಬ ಅಸಭ್ಯ ಪದ ಬಳಕೆಯಾಗದಿರಲಿ.

**5) ದಾಖಲೀಕರಿಸಿ - ಇಂಡೀಕರಿಸಿ ಎಂಬ ಯಾಂತ್ರಿಕ ಶಬ್ಧಗಳು:** ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಇಲಾಖೆ ಅನಗತ್ಯ ಮಾಹಿತಿ ಕಲೆ ಹಾಕುವುದರಲ್ಲಿ ತೊಡಗಿದೆ. ಶಿಕ್ಷಕರು ಈ ಮಾಹಿತಿ ಕ್ರೋಢೀಕರಿಸಿ ಇಂಡೀಕರಿಸುತ್ತಾ ಶಿಕ್ಷಣದ ಪ್ರಮುಖ ಘಟ್ಟವಾದ ಬೋಧನಾ ಕಾರ್ಯಕ್ಕೆ ನ್ಯಾಯ ಸಲ್ಲಿಸುವಲ್ಲಿ ವಿಫಲರಾಗುತ್ತಿದ್ದಾರೆ. ಎಲ್ಲವೂ ಡಾಕ್ಯುಮೆಂಟೇಷನ್ ... ಇದು ಯಾಂತ್ರಿಕ! ಮಕ್ಕಳ ಪ್ರಗತಿ ೦ : ಅ ಗ್ರೇಡ್! ಯಾವುದೋ ಒಂದು ಭರ್ತಿ ಮಾಡಿದರೆ ಮುಗಿಯಿತು. ವಾಟ್ಸಾಪ್ ಮೆಸೇಜ್‌ಗಳಲ್ಲಿ ಕೇಳುವ ಮಾಹಿತಿಗೆ ಸಮಯಾವಕಾಶವೂ ಇರುವುದಿಲ್ಲ. ಇಂದೇ ಕಳಿಸಿ... ಈ ಕ್ಷಣವೇ ಕಳಿಸಿ ಎಂಬ ಟಿಪ್ಪಣಿಗಳು. ಸರ್ವರ್‌ಗಳು ಬ್ಯುಸಿ ಇದ್ದರೆ ಶಿಕ್ಷಕರಾಗಲೀ, ಸಿಬ್ಬಂದಿಯಾಗಲೀ ಸುತ್ತುವ ನಕ್ಷತ್ರ ನೋಡುತ್ತಲೇ ದಿನದೂಡಬೇಕಾಗುತ್ತದೆ. ಯಾವುದೇ ಮಾಹಿತಿ ಕೇಳಿದಾಗ ಅದನ್ನು ಸಂಗ್ರಹಿಸಲು ಕಾಲಾವಕಾಶಬೇಕು. ಇಲ್ಲದಿದ್ದಲ್ಲಿ ಅಂದಾಜಿನ ಮೇಲೆ ಮಾಹಿತಿ ತುಂಬಲಾಗುತ್ತದೆ. ಮಾಹಿತಿ ಯಾವ ಉದ್ದೇಶಕ್ಕೆ ಎಂಬುದನ್ನು ಸ್ಪಷ್ಟಪಡಿಸಿದರೆ ಒಳಿತು.

**6) ಟಿ. ಸಿ ಇಲ್ಲದಿದ್ದರೂ ಪ್ರವೇಶ :** ಇತ್ತೀಚಿಗೆ ಪತ್ರಿಕೆಗಳಲ್ಲಿ ಒಂದು ಸುದ್ದಿ ಅಚ್ಚಾಗಿತ್ತು. ಮಕ್ಕಳ ಟಿ.ಸಿ ಇಲ್ಲದಿದ್ದರೂ ಪ್ರವೇಶ ಕೊಡಿ ಎಂದು ಮಗುವಿನ ಪ್ರಥಮ ದಾಖಲೆಯಲ್ಲಿ ನಮೂದಾದ ವಿವರಗಳು ವಿದ್ಯಾಭ್ಯಾಸ ಮುಕ್ತಾಯವಾಗುವವರೆಗೂ ಏಕ ರೀತಿಯದ್ದಾಗಿರಬೇಕಾಗುತ್ತದೆ. ವ್ಯಾಸಂಗ ಪ್ರಮಾಣ ಪತ್ರ ಪಡೆಯುವಾಗ ಇದು ಮುಖ್ಯವಾಗುತ್ತದೆ. ಇಂತಹ ಹೇಳಿಕೆಗಳಿಂದ ಪಾಲಕರಿಗೆ ಗೊಂದಲ ಉಂಟಾಗುತ್ತಿದೆ.

**7) ಓದಿಲ್ಲದಿದ್ದರೂ ಮುಂದಿನ ತರಗತಿಗೆ ಪಾಸ್ :** ಹಲವಾರು ಪಾಲಕರಿಗೆ ಕೊರೊನಾ ತೇರ್ಗಡೆಗಳಿಂದ ಅಸಮಾಧಾನ ಉಂಟಾಗಿದೆ. ವರ್ಷವಿಡೀ ಓದಿದ ಮಕ್ಕಳು ನಿರಾಶರಾಗಿದ್ದಾರೆ. ಕೆಲವು ಪಾಲಕರು ತಮ್ಮ ಮಕ್ಕಳನ್ನು ಹಿಂದಿನ ತರಗತಿಯಲ್ಲೇ ಮುಂದುವರೆಸಲು ಇಚ್ಛಿಸಿದ್ದಾರೆ. ಇಲಾಖೆಯಲ್ಲಿ ಪಾಲಕರ ಮನವಿಗೆ ಬೆಲೆಯೇ ಇಲ್ಲ. ಔಪಚಾರಿಕ ಶಿಕ್ಷಣದಿಂದ ವಂಚಿತರಾದ ಮಕ್ಕಳು ಮುಂದೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅರ್ಹರಾಗುತ್ತಾರೋ ಇಲ್ಲವೋ ಎಂಬ ಆತಂಕ ಮನೆ ಮಾಡಿದೆ. ಮಕ್ಕಳ ಬೌದ್ಧಿಕ ಮಟ್ಟ ಏಕರೀತಿಯಲ್ಲಿರುವುದಿಲ್ಲ. ಕಲಿಕೆಯಲ್ಲಿ, ಗ್ರಹಿಕೆಯಲ್ಲಿ ಹಿಂದಿರುವ ಮಕ್ಕಳನ್ನು ಅದೇ ತರಗತಿಯಲ್ಲಿ ಉಳಿಸಿಕೊಂಡು ಮತ್ತೊಮ್ಮೆ ಪುನರಾವರ್ತನೆ ಮಾಡಿ ಎಂದು ಪಾಲಕರು ಲಿಖಿತ ಮನವಿ ಕೊಡುತ್ತಿದ್ದಾರೆ. ಇದಕ್ಕೆ ಇಲಾಖೆಯ ಒಪ್ಪಿಗೆ ಇಲ್ಲ, ತಮ್ಮ ಮಗುವಿಗೆ ಹೇಗೆ, ಎಲ್ಲಿ, ಶಿಕ್ಷಣ ಕೊಡಿಸಬೇಕೆಂಬುದು ಪಾಲಕರ ಆಯ್ಕೆಗೆ ಬಿಡಬೇಕು. ಇದನ್ನು ಇಲಾಖೆ ನಿರ್ಧರಿಸುವುದು ಸರಿಯಲ್ಲ. 1 ರಿಂದ 9 ರ ವರೆಗೆ ಪಾಸ್ ಎಂದಾದರೆ 10ರಲ್ಲಿ ಏಕೆ ಫೇಲಾಗುತ್ತಾರೆ? ಅಂದರೆ ಆಯಾಯ ತರಗತಿಯಲ್ಲಿ ಮಗು ಕಲಿಯಬೇಕಾದ ಸಾಮರ್ಥ್ಯಗಳಿಸಿಲ್ಲ. ಇದನ್ನು ಕೊಡಬಯಸುವ ಪಾಲಕರ ಆಶಯಕ್ಕೆ ಇಲಾಖೆ ಸ್ಪಂದಿಸಬೇಕು. ಮಗುವಿನ ಪರಿಪೂರ್ಣ ಕಲಿಕೆಗೆ ಆಸ್ಪದ ನೀಡಬೇಕು.

**8) ಅವಸರದ ಕೂಸು "ಹೊಸ ಶಿಕ್ಷಣ ನೀತಿ":** ಹೊಸ ಶಿಕ್ಷಣ ನೀತಿಗೆ ಪೂರ್ಣ ಸಿದ್ಧತೆ ಬೇಕು. ಅವಸರದಲ್ಲಿ ಜಾರಿಗೆ ತಂದು ಅತಂತ್ರವಾಗಬಾರದು. ಪಠ್ಯಪುಸ್ತಕಗಳನ್ನು ಒದಗಿಸದೆ ಶಾಲಾ ಪ್ರಾರಂಭೋತ್ಸವ ಮಾಡಿದಂತೆ. ಆದರೆ ಇಡೀ ಶಿಕ್ಷಣ ವ್ಯವಸ್ಥೆ ವಿಫಲವಾಗುತ್ತದೆ. ಪೂರ್ವ ಯೋಜನೆ, ಪೂರ್ವ ಸಿದ್ಧತೆ, ಮಾನವ ಸಂಪನ್ಮೂಲ, ಮೂಲ ಸೌಕರ್ಯಗಳನ್ನು ಒದಗಿಸಿ ಹೊಸ ಶಿಕ್ಷಣ ನೀತಿ ಜಾರಿಗೆ ಬಂದರೆ ಒಳಿತು. ಹಿಂದೆ 8ನೇ ತರಗತಿಯನ್ನು ಪ್ರಾಥಮಿಕ ತರಗತಿಗಳಿಗೆ ಸೇರ್ಪಡೆ ಮಾಡಿ ಆ ಮಕ್ಕಳಿಗೆ ಸರಿಯಾದ ಶಿಕ್ಷಕರನ್ನು **(4ನೇ ಪುಟಕ್ಕೆ)**



- ಜಸ್ಟಿನ್ ಡಿ'ಸೌಜ
ಸಿದ್ಧಗಂಗಾ ವಿದ್ಯಾಸಂಸ್ಥೆ,
ದಾವಣಗೆರೆ.

## ಮಲೇಬೆನ್ನೂರಿನಲ್ಲಿ ಸರಳ ಬಕ್ರೀದ್

ಮಲೇಬೆನ್ನೂರು, ಜು.21- ಕಳೆದ ವರ್ಷದಂತೆ ಈ ವರ್ಷವೂ ಕೋವಿಡ್ ಕರಿನೆರಳಲ್ಲೇ ಬಕ್ರೀದ್ ಹಬ್ಬವನ್ನು ಪಟ್ಟಣದ ಮುಸ್ಲಿಂ ಬಾಂಧವರು ಸರಳವಾಗಿ ಆಚರಿಸಿದರು.

ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಜಿ.ಪಂ. ಮಾಜಿ ಸದಸ್ಯರಾದ ಬೆಣ್ಣೆಹಳ್ಳಿ ಹಾಲೇಶಪ್ಪ, ಬಿ.ಎಂ. ವಾಗೀಶ್ ಸ್ವಾಮಿ, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಪಿ.ಎಸ್. ಹನುಮಂತಪ್ಪ, ಐಎಂಎ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್, ರೈಸ್‌ಮಿಲ್ ಮಾಲೀಕ ಯಕ್ಕನಹಳ್ಳಿ ಬಸವರಾಜಪ್ಪ ಉಪಸ್ಥಿತರಿದ್ದರು.

ತಾ.ಪಂ. ಮಾಜಿ ಅಧ್ಯಕ್ಷ ಎಂ.ಬಿ. ರೋಷನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಉದ್ಯಮಿ ಸೈಯದ್ ರೋಷನ್, ಸೈಯದ್ ಜಾಕೀರ್, ಪುರಸಭೆ ಮಾಜಿ ಸದಸ್ಯರಾದ ಎ. ಆರೀಫ್ ಅಲಿ, ದಾದಾವಲಿ, ಯೂಸೂಫ್, ಮಹಾಲಿಂಗಪ್ಪ, ಬಿ. ಸುರೇಶ್, ಸುಬ್ಬಿ ರಾಜಣ್ಣ, ಕೆ.ಜಿ. ಲೋಕೇಶ್, ಎಂ.ಬಿ. ಫೈಜು, ಭೋವಿಕುಮಾರ್, ಪಿ.ಆರ್. ರಾಜು, ಕೆ.ಪಿ. ಗಂಗಾಧರ್, ಬಿ. ವೀರಯ್ಯ, ತಳಸದ ಬಸವರಾಜ್, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಿ. ಮಂಜುನಾಥ್ ಇನ್ನಿತರರು ಮುಸ್ಲಿಂ ಬಾಂಧವರಿಗೆ ಬಕ್ರೀದ್ ಶುಭಾಶಯ ಕೋರಿದರು. ಪುರಸಭೆ ಮುಖ್ಯಾಧಿಕಾರಿ ಡೊಂಬರ್, ಉಪ ತಹಶೀಲ್ದಾರ್ ಆರ್. ರವಿ, ಪಿಎಸ್‌ಐ ವೀರಬಸಪ್ಪ, ವೈದ್ಯಾಧಿಕಾರಿ ಡಾ. ಲಕ್ಷ್ಮೀದೇವಿ ಅವರು ಶುಭ ಕೋರಿದ್ದಾರೆ.

## ಕೂಡ್ಲಿಗಿ ತಾಲ್ಲೂಕಿನಿಂದ ಗುಳೇ



ಕೂಡ್ಲಿಗಿ, ಜು.21- ತಾಲ್ಲೂಕಿನ ಶಿವಪುರ ಗ್ರಾ.ಪಂ ವ್ಯಾಪ್ತಿಯ, ಬಂಡೇ ಬಸಾಪುರ ತಾಂಡಾದ ಸುಮಾರು1500 ಜನ ಹಾಗೂ ಕೂಡ್ಲಿಗಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಗೋವಿಂದಗಿರಿ ತಾಂಡಾದಿಂದ 500 ಜನರು ಕೆಲಸ ಹುಡುಕಿಕೊಂಡು ಮಂಡ್ಯ, ಮದ್ದೂರು ಕಡೆ ಗುಳೇ ಹೋಗಿದ್ದಾರೆ. ಇದು ಹಲವು ದಶಕಗಳಿಂದ ಪ್ರತಿ ವರ್ಷ ಜರುಗುವ ಪ್ರಕ್ರಿಯೆಯಾಗಿದೆ. ಗುಳೇ ಹೋಗುವುದರಿಂದಾಗಿ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಮಕ್ಕಳು, ವೃದ್ಧರು ಅನಾರೋಗ್ಯದಿಂದ ಬಳಲುವಂತಾಗಿದ್ದು, ತಾಲ್ಲೂಕು ಆಡಳಿತ ಗುಳೇ ಹೋಗುವುದನ್ನು ತಪ್ಪಿಸಬೇಕಿದೆ. ಇದಕ್ಕಾಗಿ ಉದ್ಯೋಗ ಸೃಷ್ಟಿಸಬೇಕಿದ್ದು, ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಕೂಡ್ಲಿಗಿ ತಾಲ್ಲೂಕು ಹುಣಸೆ ಸಾಗಾಣಿಕೆಗೆ ಹೆಸರಾಗಿದ್ದು, ಉದ್ಯೋಗ ಸೃಷ್ಟಿಗಾಗಿ ಹುಣಸೆ ಹಣ್ಣಿನ ಉತ್ಪನ್ನಗಳ ತಯಾರಿಕಾ ಘಟಕಗಳನ್ನು ಪ್ರಾರಂಭಿಸಬೇಕಿದೆ ಎಂದು ವಂದೇ ಮಾತರಂ ಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ವಿ.ಜಿ. ವೃಷಭೇಂದ್ರ ಈ ಮೂಲಕ ಒತ್ತಾಯಿಸಿದ್ದಾರೆ.

## ರಾಣೇಬೆನ್ನೂರಿನ ರೋಟರಿ ವಿದ್ಯಾಲಯದ ಪಿಯು ಫಲಿತಾಂಶ



ರಾಣೇಬೆನ್ನೂರು, ಜು.21- ರೋಟರಿ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ಪರೀಕ್ಷೆಯನ್ನು 79 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು , 20 ವಿಶಿಷ್ಟ ದರ್ಜೆ, 52 ಪ್ರಥಮ 7 ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ನಿಸರ್ಗ ಕುಂದಾಪೂರ ಪ್ರಥಮ, ಕಿರಣ ಕುಂವರ ರಜಪೂತಿ ದ್ವಿತೀಯ, ಸುರೇಖ ಅಗಡಿ ತೃತೀಯ, ವಿಜ್ಞಾನ ವಿಭಾಗದಲ್ಲಿ ಪ್ರಭಾವತಿ ತುಮ್ಮಿನಕಟ್ಟಿ ಪ್ರಥಮ, ಪದ್ಮಾವತಿ ತುಮ್ಮಿನಕಟ್ಟಿ ದ್ವಿತೀಯ, ಸಾಧನಾ ಜಾಡರ ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಸಂಸ್ಥೆಯ ಅಧ್ಯಕ್ಷ ಡಾ. ಬಸವರಾಜ ಕೇಲಗಾರ, ಕಾರ್ಯದರ್ಶಿ ಕೆ.ವಿ.ಶ್ರೀನಿವಾಸ ವಿದ್ಯಾರ್ಥಿನಿಯರನ್ನು ಅಭಿನಂದಿಸಿದ್ದಾರೆ.

## ತ್ಯಾಗ, ಬಲಿದಾನದ ಸಂಕೇತವಾದ ಬಕ್ರೀದ್ ಆಚರಣೆ



**ಹರಿಹರ**

ಹರಿಹರ, ಜು.21- ತ್ಯಾಗ, ಬಲಿದಾನದ ಸಂಕೇತ ಈದ್-ಉಲ್-ಅಜ್ಹಾ (ಬಕ್ರೀದ್) ಹಬ್ಬ ವನ್ನು ತಾಲ್ಲೂಕಿನಲ್ಲಿ ಬುಧವಾರ ಮುಸ್ಲಿಂ ಬಾಂಧವರು ಸಡಗರ, ಸಂಭ್ರಮದಿಂದ ಆಚರಿಸಿದರು.

ಬೆಳಗ್ಗೆ ಮಸೀದಿ ಹಾಗೂ ಮನೆಗಳಲ್ಲಿಯೇ ಹಬ್ಬದ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಬಹುತೇಕರು ಹಬ್ಬದ ಹಿಂದಿನ ದಿನವಾದ ಮಂಗಳವಾರದಂದು ಉಪವಾಸ ಆಚರಿಸಿದರು. ಮಹಿಳೆಯರು, ಮಕ್ಕಳಾದಿಯಾಗಿ ಎಲ್ಲರೂ ಬೆಳಗಿನ ಜಾವ ಎದ್ದು ಶುಭ್ರರಾಗಿ ಹೊಸ ಬಟ್ಟೆಗಳನ್ನು ತೊಟ್ಟು ಹಬ್ಬದ ಪ್ರಾರ್ಥನೆ ಮಾಡಿದರು. ನಂತರ ಮನೆಯವರು, ನೆರೆಹೊರೆ, ಸಂಬಂಧಿಕರೊಂದಿಗೆ ಶುಭಾಶಯ ವಿನಿಮಯ ಮಾಡಿಕೊಂಡರು.

ಮಸೀದಿಗಳಲ್ಲಿ ಪ್ರವಚನ ನೀಡಿದ ಧರ್ಮಗುರುಗಳು, ಅಲ್ಲಾಹನ ಇಚ್ಛೆಯಂತೆ ಪ್ರವಾದಿ ಇಬ್ರಾಹಿಮರು ತಮ್ಮ ಇಳಿವಯಸ್ಸಿನಲ್ಲಿ ಪುತ್ರ ಇಸ್ಮಾಯಿಲ್‌ರನ್ನು ಬಲಿ ಕೊಡಲು ಸಿದ್ಧರಾದರು. ಆ ಘಟನೆಯ ಪ್ರತೀಕವಾಗಿ ಬಕ್ರೀದ್ ಹಬ್ಬವನ್ನು ಆಚರಿಸಲಾಗುತ್ತಿದೆ. ಪ್ರಾಣಿ ಬಲಿ ಕೊಡುವುದು ಇಲ್ಲಿ ಸಾಂಕೇತಿಕವಾಗಿದೆ. ಅಗತ್ಯ ಬಿದ್ದಾಗ ನೆರೆ-ಹೊರೆ, ನಾಡು, ದೇಶ, ಧರ್ಮ, ಮಾನವ ಕುಲಕ್ಕಾಗಿ ಧನ, ಸಮಯ, ಶಕ್ತಿ, ಸಾಮರ್ಥ್ಯ, ಸಂಪನ್ಮೂಲಗಳ ತ್ಯಾಗ ಮಾಡಬೇಕೆಂಬುದು ಹಬ್ಬದ ತಿರುಳಾಗಿದೆ ಎಂದು ತಿಳಿಸಿದರು.

ನಮ್ಮಲ್ಲಿರುವ ಸಿಟ್ಟು, ದ್ವೇಷಾಸೂಯೆ, ಅಹಂಕಾರ, ದುಶ್ಚಟ, ಭಯ, ಆತಂಕ ಇತರೆ ದುರ್ಗುಣಗಳನ್ನು ನಾವು ತ್ಯಜಿಸಿದರೆ ಅದೂ ಕೂಡ ಬಲಿದಾನ, ತ್ಯಾಗಕ್ಕೆ ಸಮಾನ. ಕೋವಿಡ್‌ನಿಂದಾಗಿ ಎರಡನೇ ವರ್ಷದ ಬಕ್ರೀದ್ ಹಬ್ಬದ ಸಾಮೂಹಿಕ ಪ್ರಾರ್ಥನೆಯನ್ನು ಈದ್ಗಾ ಮೈದಾನಗಳ ಬದಲು ಮಸೀದಿ, ಮನೆಗಳಲ್ಲೇ ನಿರ್ವಹಿಸಲಾಗುತ್ತಿದೆ.

ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಎಚ್.ಎಸ್. ಶಿವಶಂಕರ್, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಹಾಗೂ ಸಮಾಜದ ಮುಖಂಡರು ಹಬ್ಬದ ಶುಭಾಶಯ ಕೋರಿದರು. ತಾಲ್ಲೂಕಿನ ಮಲೇಬೆನ್ನೂರು, ಬೆಳ್ಳೂಡಿ, ಭಾನುವಳ್ಳಿ, ಕರ್ಲಹಳ್ಳಿ, ರಾಜನಹಳ್ಳಿ, ಕೊಂಡಜ್ಜಿ ಸೇರಿದಂತೆ ಹಲವು ಗ್ರಾಮಗಳ ಮಸೀದಿಗಳಲ್ಲೂ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು.

## ಹಾಸ್ಟೆಲ್ ಸಮೀಪದ ಮದ್ಯದಂಗಡಿ ತೆರವಿಗೆ ಆದೇಶ



**ಜಗಳೂರು**

ಜಗಳೂರು, ಜು.21- ತಾಲ್ಲೂಕಿನ ಬಿದರಕೆರೆ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ಅಂಬೇಡ್ಕರ್ ವಸತಿಯುತ ವಿದ್ಯಾರ್ಥಿ ನಿಲಯದ ಬಳಿ ಇರುವ ಮದ್ಯದ ಅಂಗಡಿ ಯನ್ನು ತೆರವುಗೊಳಿಸು ವಂತೆ ಬಾರ್ ಮಾಲೀಕರಿಗೆ ತಹಶೀಲ್ದಾರ್ ಡಾ. ನಾಗವೇಣಿ ಸೂಚನೆ ನೀಡಿದರು.

ಪೊಲೀಸ್ ಅಧಿಕಾರಿಗಳು ಹಾಗೂ ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳೊಂದಿಗೆ ಗ್ರಾಮಕ್ಕೆ ಭೇಟಿ ನೀಡಿದ ತಹಶೀಲ್ದಾರ್ ನಾಗವೇಣಿ ಅವರು ಈ ನಿರ್ದೇಶನ ನೀಡಿದ್ದಾರೆ.

ವಿದ್ಯಾರ್ಥಿ ನಿಲಯದ ಬಳಿ ಇರುವ ಮದ್ಯದ ಅಂಗಡಿ ಹಾಗೂ ಎಗ್‌ರೈಸ್ ಅಂಗಡಿಗಳಿಂದ ಮಕ್ಕಳಿಗೆ ತೊಂದರೆಯಾಗಿದ್ದು, ಸಮಸ್ಯೆ ಉಂಟಾಗಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ತಹಶೀಲ್ದಾರ್ ಕ್ರಮ ಕೈಗೊಂಡಿದ್ದಾರೆ.

ಈ ಸಂದರ್ಭದಲ್ಲಿ ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್, ಪಿಎಸ್‌ಐ ಸಂತೋಷ್ ಬಾಗೋಜಿ, ವಸತಿ ಶಾಲೆಯ ಪ್ರಾಂಶುಪಾಲ ರವಿಕುಮಾರ್, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಮರುಳಸಿದ್ದಪ್ಪ ಇನ್ನಿತರರಿದ್ದರು.

## ನಗರದಲ್ಲಿ ಇಂದು ಶ್ರೀ ಉತ್ಸವಾಂಬ ದೇವಿಗೆ ಅಭಿಷೇಕ



ಪಿ. ಹಾಲೇಶಪ್ಪ (ವಸಂತ ರಸ್ತೆ) ರಸ್ತೆಯಲ್ಲಿರುವ ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಆದಿಶಕ್ತಿ ದೇವಿ, ಶ್ರೀ ಗಣೇಶ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ 9ನೇ ವರ್ಷದ ಮಹಾಮಂಡಲಾಭಿಷೇಕವು ಇಂದಿನಿಂದ ಬರುವ ಸೆಪ್ಟಂಬರ್ 7 ರವರೆಗೆ 48 ದಿನಗಳ ಕಾಲ ದೇವರಿಗೆ ಸರ್ವ ಭಕ್ತಾದಿಗಳಿಂದ ಮಹಾಭಿಷೇಕವಿರುತ್ತದೆ. ಕೊನೆಯ ದಿನ ತಾಯಿಯವರಿಗೆ ಮಹಾಪೂಜೆ ಹಾಗೂ ಮಧ್ಯಾಹ್ನ 12.30 ರಿಂದ ಪ್ರಸಾದ ವಿನಿಯೋಗವಿರುತ್ತದೆ ಎಂದು ಶ್ರೀ ಉತ್ಸವಾಂಬ ದೇವಿ ಭಕ್ತ ಮಂಡಳಿಯವರು ತಿಳಿಸಿದ್ದಾರೆ.

## ಡಾ. ವೆಂಕಟೇಶ್ ಅವರಿಗೆ ಫೆಲೋಶಿಪ್

ದಾವಣಗೆರೆ, ಜು.21- ನಗರದ ಸಿಟಿ ಸೆಂಟ್ರಲ್ ಆಸ್ಪತ್ರೆಯ ಮುಖ್ಯ ನಿರ್ವಾಹಕರೂ ಆದ ಹೃದಯ ರೋಗ ತಜ್ಞ ಡಾ. ಬಿ.ಪಿ. ವೆಂಕಟೇಶ್ ಅವರಿಗೆ ಅಮೆರಿಕದ ಫೆಲೋಶಿಪ್ ಎಫ್‌ಎಸ್‌ಸಿಎಐ (ಯುಎಸ್‌ಎ) ಲಭಿಸಿದೆ.

**ಅಣಬೆ ಬೇಸಾಯ ತರಬೇತಿ**

ದಾವಣಗೆರೆಯಲ್ಲಿ ದಿನಾಂಕ 25.07.2021 ರಂದು ಅಯಿಸ್ಟರ್ (oyster) ಅಣಬೆ ಬೇಸಾಯದ ಬಗ್ಗೆ ತರಬೇತಿ ನೀಡಲಾಗುವುದು.

ನಮ್ಮಲ್ಲಿ ಸಿಗುವ ವಿವಿಧ ಸೇವೆಗಳು:

1) ಎಲ್ಲಾ ವಿಧದ ಅಣಬೆ ಬೇಸಾಯ ತರಬೇತಿ.
2) ಅಣಬೆ ಬೀಜ ಮತ್ತು ಉಪಕರಣಗಳು


Thanvi Biotechnology Davangere.
83106 30254, 90355 44479

**WANTED**

1) Required Cashier (Male) for Textile Business with Basic Knowledge of Managing and Cash Handling.

Salary Negotiable. Interested can Apply with proper Resume along with Photo Attested.

ASHUJI DISTRIBUTORS
# 323, Binny Company Road, Davangere.




## ನರಗನಹಳ್ಳಿ : ನಾಳೆ ಆರೋಗ್ಯ ಶಿಬಿರ

ದಾವಣಗೆರೆ, ಜು.21- ಸಪ್ತಗಿರಿ ಆಸ್ಪತ್ರೆ (ಬೆಂಗಳೂರು) ಹಾಗೂ ಕರ್ನಾಟಕ ತಾಂಡಾ ರಕ್ಷಣಾ ವೇದಿಕೆ ಸಂಯುಕ್ತಾಶ್ರಯದಲ್ಲಿ ವೇದಿಕೆ ಅಧ್ಯಕ್ಷ ಹೆಚ್.ಕೆ. ಲಿಂಗರಾಜ್ ಅವರ ಜನ್ಮ ದಿನದ ಪ್ರಯುಕ್ತ ನಾಡಿದ್ದು ದಿನಾಂಕ 23 ರಂದು ಮಧ್ಯಾಹ್ನ 3 ಕ್ಕೆ ತಾಲ್ಲೂಕಿನ ನರಗನಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಉಚಿತ ಹೃದಯ ರೋಗ, ನರರೋಗ, ಮೂತ್ರಪಿಂಡದ ಕಲ್ಲು ಹಾಗೂ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಯಲಿದೆ.

ಆರೋಗ್ಯ ಶಿಬಿರದ ಮಾಹಿತಿಗಾಗಿ ವಿನೋದ್ ಕುಮಾರ್ (9731782463), ಆನಂದ್ (9035957039), ಸಂದೀಪ್ (9964909493) ಅವರನ್ನು ಸಂಪರ್ಕಿಸಬಹುದು.



# ಸೂತಕದ ಮನೆಯಲ್ಲಿ ಬಿಜೆಪಿಯ ಸಂಭ್ರಮದ ರಾಜಕಾರಣ



## ಹರಪನಹಳ್ಳಿಯಲ್ಲಿ ಮಾಜಿ ಸಚಿವ ಸಂತೋಷ್ ಲಾಡ್ ವಾಗ್ದಾಳಿ

ಹರಪನಹಳ್ಳಿ, ಜು.21- ಕೋವಿಡ್ ಕಾಯಿಲೆಯಿಂದ ಮೃತಪಟ್ಟ ಹೆಣಗಳ ರಾಶಿಯ ಮುಂದೆ ವ್ಯಾಪಾರಕ್ಕೆ ಕುಳಿತು ಕೊಂಡಿರುವ ರಾಜ್ಯ ಹಾಗೂ ಕೇಂದ್ರದ ಆಡಳಿತಾರೂಢ ಬಿಜೆಪಿ ಪಕ್ಷ ಸೂತಕದ ಮನೆಯಲ್ಲಿಯೂ ಸಂಭ್ರಮದ ರಾಜಕಾರಣಕ್ಕೆ ಇಳಿದಿದೆ ಎಂದು ಮಾಜಿ ಸಚಿವ ಸಂತೋಷ್ ಲಾಡ್ ವಾಗ್ದಾಳಿ ನಡೆಸಿದರು.

ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ಕಾಂಗ್ರೆಸ್ ನಿಂದ ಆಯೋಜಿಸಿದ್ದ ದೈನಂದಿನ ಉಪಹಾರ ಮತ್ತು ಊಟದ ಭೋಜನಾಲಯಕ್ಕೆ ಚಾಲನೆ ನೀಡಿ ಮಾತನಾಡಿದರು.

ದೇಶದ ಆರ್ಥಿಕ ವ್ಯವಸ್ಥೆ ಚೇತರಿಸಿಕೊಳ್ಳಲಾಗದಷ್ಟು ಕುಸಿತ ಕಂಡಿದೆ. ದುಡಿಯುವ ಕೈಗಳಿಗೆ ಕೆಲಸವಿಲ್ಲದೆ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಅಗತ್ಯ ವಸ್ತುಗಳ ಬೆಲೆಗಳ ಏರಿಕೆಯಿಂದಾಗಿ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಬದುಕು ಅಯೋಮಯವಾಗಿದೆ. ರೂಪಾಯಿ ಮೌಲ್ಯ ಕುಸಿತವಾದರೂ ಡಾಲರ್ ಮೌಲ್ಯ ಹೆಚ್ಚಳಕ್ಕೆ ಪ್ರಧಾನಿಯವರ ಕೊಡುಗೆ ಅಮೂಲ್ಯವಾಗಿದೆ!. ರಾವಣ ರಾಜ್ಯ ಶ್ರೀಲಂಕಾ ದೇಶದಲ್ಲಿ ಪೆಟ್ರೋಲ್ ಬೆಲೆ 55 ರೂ., ಸೀತೆಯ ನಾಡು ನೇಪಾಳದಲ್ಲಿ 6 ರೂ. ಆದರೆ, ರಾಮ ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಗಳು ಶತಕ ದಾಟಿವೆ ಎಂದು ವ್ಯಂಗ್ಯವಾಡಿದರು.

ಸಂಡೂರು ಶಾಸಕ ತುಕಾರಾಂ ಮಾತನಾಡಿ, ದೇಶದಲ್ಲಿ 44 ಲಕ್ಷ ಜನರು ಕೋವಿಡ್‌ನಿಂದ ಸಾವನ್ನಪ್ಪಿದ್ದರೂ ಸರ್ಕಾರ ತಪ್ಪು ಮಾಹಿತಿ ನೀಡುತ್ತಿದೆ ಎಂದು ಕಿಡಿ ಕಾರಿದರು.

ಹಗರಿಬೊಮ್ಮನಹಳ್ಳಿ ಶಾಸಕ ಭೀಮಾ ನಾಯ್ಕ ಮಾತನಾಡಿ, ಕೊರೊನಾದಿಂದ ಸತ್ತವರ ಡೆತ್ ಸರ್ಟಿಫಿಕೇಟ್ ನೀಡಲು ಸಾಧ್ಯವಾಗದ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಮೃತಪಟ್ಟ ಕುಟುಂಬಗಳಿಗೆ ಪರಿಹಾರ ನೀಡಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಬಳ್ಳಾರಿ ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಬಿ.ಎಂ. ಶಿವಯೋಗಿ, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಟಿ. ಸುಭಾಶ್ಚಂದ್ರ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಆಶಾಲತಾ, ಬಳ್ಳಾರಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಹಳ್ಳಿಗೌಡ, ತಾಲ್ಲೂಕು ಮಹಿಳಾ ಅಧ್ಯಕ್ಷೆ ಪುಷ್ಪಾ ದಿವಾಕರ್, ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ, ಹೊಸಪೇಟೆ ಬ್ಲಾಕ್ ಅಧ್ಯಕ್ಷ ಇಮಾಮ್ ಖಾಜಿ, ಪುರಸಭೆ ಸದಸ್ಯ ಲಾಟಿ ದಾದಾಪೀರ್, ಮುಖಂಡರಾದ ಇರ್ಫಾನ್ ಮುದುಗಲ್, ವಿಜಯ ದಿವಾಕರ್, ಶಿವಕುಮಾರನಾಯ್ಕ, ತೆಲಿಗಿ ಟಿ.ಉಮಾಕಾಂತ, ತೆಲಿಗಿ ಟಿ. ಮಂಜುನಾಥ್, ಮುಂಡರಗಿ ನಾಗರಾಜ, ಜಿಷಾನ್, ಶ್ರೀಕಾಂತ್ ಇನ್ನಿತರರು ಪಾಲ್ಗೊಂಡಿದ್ದರು.

# ದ್ವಿತೀಯ ಪಿಯು ಫಲಿತಾಂಶದಲ್ಲಿ ಜ್ಞಾನ ಸಾಗರ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ



ದಾವಣಗೆರೆ, ಜು. 21 - ದ್ವಿತೀಯ ಪಿ.ಯು.ಸಿ. ಫಲಿತಾಂಶದಲ್ಲಿ ನಗರದ ಜ್ಞಾನ ಸಾಗರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸಾಧನೆ ಮೆರೆದಿದ್ದಾರೆ. ಕಾಲೇಜಿನ ಎಸ್.ಬಿ. ರುಚಿತ ರಾಣಿ, ಜಿ.ಕೆ. ಹರ್ಷಿತ, ಎಂ.ಎಲ್. ಚೈತ್ರ, ಹೆಚ್. ಭವಾನಿ, ಬಿ.ಎಂ. ಪವನ್‌ಕುಮಾರ್, ಎಂ.ಎನ್. ರೇಖಾ, ಎಸ್. ದೀಪ, ಎಂ.ಪಿ. ಲಕ್ಷ್ಮಿ, ಜಿ.ಕೆ. ಪ್ರಮೋದ್ ಇವರುಗಳು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ, ಅಲ್ಲದೆ ಶೇ. 90ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಗೆ ಕಾಲೇಜಿನ ಪ್ರಾಂಶುಪಾಲ ಕೆ. ಪ್ರಸನ್ನ ಕುಮಾರ್ ಅಭಿನಂದಿಸಿದ್ದಾರೆ.

# ಇಳುವರಿ ಕುಸಿತದಿಂದ ಮಾವು ಬೆಳೆಗಾರರ ಆತಂಕ



ದಾವಣಗೆರೆ, ಜು.21- ನಗರದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ಹಾಗೂ ಸ್ಕೋಡ್‌ವೇಸ್ ಸಂಸ್ಥೆ (ಶಿರಸಿ) ಇವರ ಸಂಯುಕ್ತಾಶ್ರಯದಲ್ಲಿ ಚನ್ನಗಿರಿ ತಾಲ್ಲೂಕಿನ ದೊಡ್ಡಬ್ಬಿಗೆರೆ ಗ್ರಾಮದಲ್ಲಿ ಮಾವು ಪುನಶ್ಚೇತನ ಕುರಿತು ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಕಾರ್ಯಕ್ರಮ ನಡೆಯಿತು.

ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಮಾತನಾಡಿ, ಪ್ರಸ್ತುತ ಮಾವು ಬೆಳೆಗಾರರು ಇಳುವರಿ ಕುಸಿತದಿಂದ ಆತಂಕಕ್ಕೆ ಒಳಗಾಗಿದ್ದಾರೆ. ಸಂತೇಬೆನ್ನೂರು ಹೋಬಳಿಯಲ್ಲಿ ಸುಮಾರು 1300 ಹೆಕ್ಟೇರ್ ಪ್ರದೇಶದಲ್ಲಿ ಮಾವಿನ ವಿಸ್ತೀರ್ಣವಿದ್ದು, ಬೆಳೆಗಾರರು ರೋಗ ಮತ್ತು ಕೀಟದ ಹಾವಳಿಯಿಂದ ಬಸವಳಿದಿದ್ದಾರೆ.

ಮಾವು ಕೊಯ್ಲು ಮುಗಿದ ನಂತರ ಮರದ ಶೇಕಡ 25-30 ರಷ್ಟು ಗಿಡದ ಅನುಪಯುಕ್ತ ರೆಂಬೆ ಕೊಂಬೆಗಳನ್ನು, ರೋಗ/ಕೀಟ ಬಾಧಿತ ಕೊಂಬೆಗಳನ್ನು ಸವರಬೇಕು. ನಂತರ ಮರಕ್ಕೆ ಕಾಪರ್ ಅಕ್ಸಿಕ್ಲೋರೈಡ್‌ನಿಂದ ಅಂಟು ದ್ರಾವಣವನ್ನು ಮಾಡಿ ಹಚ್ಚಬೇಕೆಂದರು. ಈ ರೀತಿ ಪುನಶ್ಚೇತನದಿಂದ ಗಿಡಗಳಿಗೆ ಆಹಾರದ ಕೊರತೆ ನೀಗುವುದಲ್ಲದೇ, ಗಾಳಿ ಬೆಳಕು ಸರಾಗವಾಗಿ ಸಿಕ್ಕು ದ್ಯುತಿಸಂಶ್ಲೇಷಣೆ ಕ್ರಿಯೆ ಹೆಚ್ಚುವುದು. ಇದರಿಂದ ಪ್ರತೀ ವರ್ಷ ಇಳುವರಿಯ ಸ್ಥಿರತೆ ಕಾಪಾಡಿಕೊಳ್ಳಲು ಸಹಾಯವಾಗುವುದು ಎಂದರು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಎಂ.ಜಿ. ರೋಹಿತ್ ಮಾತನಾಡಿ, ಇಲಾಖೆಯಿಂದ ಈ ವರ್ಷ ಪರಂಪರಾಗತ್ ಕೃಷಿ ವಿಕಾಸ ಯೋಜನೆಯಡಿ ತಮ್ಮ ಗ್ರಾಮಕ್ಕೆ ಎರೆಹುಳು ಉತ್ಪಾದನಾ ಘಟಕ, ಜೀವಾಮೃತ ಘಟಕ, ಕೊಟ್ಟಿಗೆ ಮನೆ, ಜೇನು ಪೆಟ್ಟಿಗೆ, ಹಸಿರೆಲೆ ಗೊಬ್ಬರ ಘಟಕ ಮುಂತಾದವುಗಳಿಗೆ ಅನುದಾನ ಲಭ್ಯವಿದೆ. ಇದರ ಸದುಪಯೋಗ ಪಡೆಯಬೇಕೆಂದರು. ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ, ಹೊಸದಾಗಿ 54 ತೋಟಗಾರಿಕೆ ಬೆಳೆಗಳ ತೋಟ ಮಾಡಲು ಅನುದಾನ ಲಭ್ಯವಿದ್ದು ಗ್ರಾಮ ಪಂಚಾಯ್ತಿಯಿಂದ ಕ್ರಿಯಾ ಯೋಜನೆ ಮಂಜೂರು ಮಾಡಿಸಿಕೊಂಡು ಇದರ ಲಾಭ ಪಡೆಯಿರಿ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಅಧಿಕಾರಿಗಳಾದ ರಮೇಶ್, ಅವಿನಾಶ್, ರೈತರಾದ ತಿಪ್ಪೇಸ್ವಾಮಿ, ಪ್ರಸನ್ನ ಕುಮಾರ್, ಸತೀಶ್, ಹಾಲಸ್ವಾಮಿ ಮತ್ತು ಮೊಹಮದ್ ಇನ್ನಿತರರಿದ್ದರು.

# ಬೆಲೆ ಏರಿಕೆ ಖಂಡಿಸಿ ನಿಖಿಲ್ ಕುಮಾರಸ್ವಾಮಿ, ಪ್ರಜ್ವಲ್ ರೇವಣ್ಣ ಯುವ ಒಕ್ಕೂಟದ ಪ್ರತಿಭಟನೆ



ದಾವಣಗೆರೆ,ಜು.21- ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ವಿದ್ಯುತ್ ದರ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ದ ಅಖಿಲ ಕರ್ನಾಟಕ ಜಾತ್ಯತೀತ ನಿಖಿಲ್ ಕುಮಾರಸ್ವಾಮಿ, ಪ್ರಜ್ವಲ್ ರೇವಣ್ಣ ಯುವ ಒಕ್ಕೂಟದಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಉಪವಿಭಾಗಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿ, ನಂತರ ರಾಜ್ಯಪಾಲರಿಗೆ ಮನವಿ ರವಾನಿಸುವಂತೆ ಕೋರಿ ಉಪ ವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ನಡೆಸುವ ಆಡಳಿತವನ್ನು ಪ್ರಜಾಪ್ರಭುತ್ವ ಎನ್ನುತ್ತಾರೆ. ಆದರೆ ಕಳೆದ 2 ವರ್ಷಗಳಿಂದ ಕೊರೊನಾ ಸಾಂಕ್ರಾಮಿಕ ಕಾಯಿಲೆಯಿಂದ ಇಡೀ ದೇಶವೇ ತತ್ತರಿಸಿ ಹೋಗಿದೆ. ಕೋಟ್ಯಾಂತರ ಜನರು ಬೀದಿ ಪಾಲಾಗಿ, ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾರೆ. ಇಂತಹ ಸಮಯದಲ್ಲಿ ಶ್ರೀಸಾಮಾನ್ಯರ ಬೆನ್ನಿಗೆ ನಿಲ್ಲಬೇಕಾಗಿರುವ ಕೇಂದ್ರ, ರಾಜ್ಯ ಸರ್ಕಾರಗಳು ಬೆಲೆ ಏರಿಕೆ ಮಾಡುವ ಮೂಲಕ ಬಡವರ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡುತ್ತಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಜೀವನ್, ಕಿರಣ್ ಹುಲ್ಲುಮನೆ, ರಾಜಪ್ಪ, ಸುಭಾನಿ, ಉಮೇಶ್, ಮಂಜು, ಇಬ್ರಾಹಿಂ, ಸಲೀಂ ಸೇರಿದಂತೆ ಇತರರು ಭಾಗವಹಿಸಿದ್ದರು.



# ರಾಣೇಬೆನ್ನೂರಿನಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ದಿನಸಿ ಕೊಡುಗೆ

ರಾಣೇಬೆನ್ನೂರು, ಜು.21- ಬಡವರ ಬದುಕನ್ನು ಬರಡು ಮಾಡಿದ ಕೊರೊನಾ ಕಣ್ಣೀರು ತರಿಸುತ್ತಿದ್ದು, ದೇವರು ಕೊಟ್ಟಿರುವುದರಲ್ಲಿಯೇ ಸ್ವಲ್ಪವನ್ನು ಇಲ್ಲದವರಿಗೆ ಕೊಟ್ಟರೆ ಅವರೂ ಬಕ್ರೀದ್ ಹಬ್ಬವನ್ನು ಸಂತೋಷದಿಂದ ಆಚರಿಸುತ್ತಾರೆ ಎಂದು ಹೇಳಿದ ನಗರಸಭೆ ಗುತ್ತಿಗೆದಾರ ಮುಸ್ತಫಾ ದರವಾನ ಅವರು ಬಡವರಿಗೆ, ಅಂಗವಿಕಲರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು.

ದೌಲತ್ ಬಜಾರ್ ಬಳಿಯ ಇಸ್ಲಾಂಪುರ ಓಣಿಯಲ್ಲಿ ನಿನ್ನೆ ಬೆಳಿಗ್ಗೆ ನಗರಸಭೆ ಮಾಜಿ ಸದಸ್ಯ ಜಮ್ಮಣ್ಣಿ ಅತ್ತಾರ, ಸನಾಉಲ್ಲಾ ಮುಲ್ಲಾ, ರಾಜು ಹರಪನಹಳ್ಳಿ, ದಸ್ತಗೀರ್‌ಸಾಬ್, ಅಬ್ದುಲ್ ಖಯಾಮುಲ್ ಶಿಕಾರಿಪುರ, ಆರ್. ಬಿ. ಬಾದಷಹ್ ಇನ್ನಿತರರಿದ್ದರು.

# ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಮಂಜುಳಾ

ದಾವಣಗೆರೆ, ಜು. 21- ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಮಂಜುಳಾ ಮಹೇಶ್, ಪ್ರಧಾನ ಕಾರ್ಯದರ್ಶಿಯಾಗಿ ಪುಷ್ಪ ವಾಲಿ, ಭಾಗ್ಯ ಪಿಸಾಳೆ, ಉಪಾಧ್ಯಕ್ಷರುಗಳಾಗಿ ಪುಷ್ಪಾ ದುಗ್ಗೇಶ್, ದೀಪಾ ಜಗದೀಶ್, ಚಂದ್ರಿಕಾ ಜಗನ್ನಾಥ್, ಸುಜಾತ ಚನ್ನಬಸಪ್ಪ, ಲಕ್ಷ್ಮಿದೇವಿ ಪಾಟೀಲ್, ಕಾರ್ಯದರ್ಶಿಗಳಾಗಿ ನಾಗರತ್ನ ಬಾಯಿ ಕಾಟೇ, ವೀಣಾ ಮಲ್ಲಿಕಾರ್ಜುನ್, ಎಂ. ರೇಖಾ, ಸೌಮ್ಯ ಕಾಕಡೆ, ಜ್ಯೋತಿ ಬಸಪ್ಪ, ಕೋಶಾಧ್ಯಕ್ಷರಾಗಿ ಗೀತಾ ಗಂಗಾಧರ್ ನಾಯ್ಕ ನೇಮಕವಾಗಿದ್ದಾರೆ.

# ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಲು ಜಂಗಮ ಮಹಾಸಭಾ ನಿರ್ಧಾರ



ದಾವಣಗೆರೆ, ಜು.21- ಅಖಿಲ ಭಾರತ ಜಂಗಮ ಮಹಾ ಸಭಾದ ಮಾಸಿಕ ಸಭೆಯು ನಗರದ ಶ್ರೀ ಡಾ. ಸದ್ಯೋಜಾತ ಶಿವಾಚಾರ್ಯರ ಹಿರೇಮಠದಲ್ಲಿ ಮೊನ್ನೆ ನಡೆಯಿತು.

ಸಮಾಜದ ಮುಂದಿನ ಆಗು-ಹೋಗುಗಳ ಬಗ್ಗೆ ಚರ್ಚೆ ಮಾಡಿ, ಸರ್ಕಾರದ ವತಿಯಿಂದ ಬೇಡ ಜಂಗಮರಿಗೆ ಸಿಗುವಂತಹ ಸೌಲಭ್ಯ ಮತ್ತು ಅನುದಾನಗಳನ್ನು ಸಮಾಜದ ಜನರಿಗೆ ದೊರಕಿಸಿಕೊಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಮಾಜದ ವತಿಯಿಂದ ಸಮಾಜಮುಖಿ ಕಾರ್ಯಗಳನ್ನು ಹಮ್ಮಿಕೊಳ್ಳುವ ಬಗ್ಗೆಯೂ ವಿಚಾರ ವಿನಿಮಯ ಮಾಡಲಾಯಿತು.

ಅರುಣಕುಮಾರ್ ಜಡಿಮಠ್, ಡಾ. ಹಾಲಸ್ವಾಮಿ ಕಂಬಾಳಿಮಠ್, ಉಳುವಯ್ಯ, ಶಶಿಕಲಾ, ಚಂದ್ರಕಲಾ, ವಕೀಲರಾದ ಶ್ರೀಮತಿ ವಸುಂಧರಾ, ಸಂತೋಷ್, ಗಂಗಾಧರಾಯ ಹಿರೇಮಠ್, ಶಾಂತಯ್ಯ ಪರಡಿ ಮಠ, ದಾಕ್ಷಾಯಣಮ್ಮ ಮತ್ತು ಇತರರು ಚರ್ಚೆಯಲ್ಲಿ ಭಾಗವಹಿಸಿದ್ದರು.

# ನಿಜಲಿಂಗಪ್ಪ ಲೇಔಟ್ ಪಾರ್ಕ್‌ನ ಸುತ್ತ ಹೊಂಗೆ ಗಿಡ

ದಾವಣಗೆರೆ, ಜು.21- ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ವತಿಯಿಂದ ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ಶ್ರೀಮತಿ ಗಂಗೂಬಾಯಿ ಹಾನಗಲ್ ಉದ್ಯಾನವನದ ಸುತ್ತ ಮುತ್ತ ಹೊಂಗೆ ಗಿಡಗಳನ್ನು ನೆಡಲಾಯಿತು. ನಗರಾದ್ಯಂತ ಎಲ್ಲಿಯಾದರು ತಮ್ಮ ಮನೆ ಮುಂದೆ ಅಥವಾ ರಸ್ತೆಯಲ್ಲಿ ಹೊಂಗೆ ಗಿಡಗಳನ್ನು ನೆಟ್ಟು ಸಂರಕ್ಷಿಸ ಬಯಸುವವರು ಕರುಣಾ ಜೀವ ಕಲ್ಯಾಣ ಟ್ರಸ್ಟಿನ ಲಿಂಗರಾಜು (95380 24422, ಸದಾನಂದ (6363151534) ಅವರನ್ನು ಸಂಪರ್ಕಿಸಬಹುದು.

# ನಲುಗಿದ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು

(3ನೇ ಪುಟದಿಂದ) ಒದಗಿಸದೆ ಯೋಜನೆ ವಿಫಲವಾದ ನಿದರ್ಶನವಿದೆ.

**9) ಖಾಸಗಿ ಶಿಕ್ಷಕರ ಕಡೆಗಣನೆ:** ಖಾಸಗಿ ಶಿಕ್ಷಣ ಸಂಸ್ಥೆಗಳು ಹಲವಾರು ಶಿಕ್ಷಕರಿಗೆ ಉದ್ಯೋಗ ಅವಕಾಶ ನೀಡಿವೆ. ಪಾಲಕರು ಪಾವತಿಸುವ ಶುಲ್ಕದಿಂದ ಶಾಲೆಗೆ ಬೇಕಾದ ಮೂಲ ಸೌಕರ್ಯ, ಕಟ್ಟಡ ನಿರ್ವಹಣೆ, ವಾಹನಗಳ ನಿರ್ವಹಣೆ ಮತ್ತು ವೇತನವನ್ನು ಭರಿಸಲಾಗುತ್ತಿತ್ತು. ಸರ್ಕಾರದ ದಿನಕ್ಕೊಂದು ಹೇಳಿಕೆಯಿಂದ ಶಿಕ್ಷಣ ಸಂಸ್ಥೆಗಳು ನಲುಗಿ ಹೋಗುತ್ತಿವೆ. ಎಷ್ಟೋ ಸಂಸ್ಥೆಗಳು ಖರ್ಚು–ವೆಚ್ಚ ನಿಭಾಯಿಸಲಾರದೆ ಮುಚ್ಚಿ ಹೋಗಿವೆ. ಶಿಕ್ಷಕರು ಬೀದಿ ಪಾಲಾಗಿದ್ದಾರೆ. ಟಿ. ವಿ. ಗಳಲ್ಲಿ ಬಿತ್ತರವಾದ ಹಣ್ಣು ಮಾರುವ ಶಿಕ್ಷಕರ ಬಗ್ಗೆ ಅನುಕಂಪ ತೋರಿಸುವ ಮಕ್ಕಳಲ್ಲಿರುವ ಕನಿಷ್ಠ ಕಾಳಜಿಯೂ ನಮ್ಮ ಸರ್ಕಾರಕ್ಕೆ ಇಲ್ಲವಾಗಿದೆ. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ನೊಂದ ಶಿಕ್ಷಕರ ನೆರವಿಗೆ ಧಾವಿಸದೆ ಆಶ್ವಾಸನೆಗಳಲ್ಲೇ ಕಾಲದೂಡುತ್ತಿದೆ. ಎರಡೆರಡು ಬಾರಿ ಶಿಕ್ಷಕರ ವಿವರ ಕೇಳಿದ ಇಲಾಖೆ ಅದರ ಬಗ್ಗೆ ಚಕಾರವೆತ್ತಿಲ್ಲ. ಸರ್ಕಾರದ ಸಹಾಯ ಹಸ್ತದ ಭರವಸೆಗೆ ಶಿಕ್ಷಕರು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. "ಫೀ ಕಟ್ಟಿ ದಾಖಲಾಗಿ" ಎಂಬ ಸ್ಪಷ್ಟ ನಿರ್ದೇಶನ ಬಂದರೆ ಸಂಸ್ಥೆಗಳವರು ಶಿಕ್ಷಕರ ವೇತನ ಪಾವತಿಸಬಹುದು. ಪೆಟ್ರೋಲ್, ಡೀಸೆಲ್, ವಿದ್ಯುತ್, ಆಹಾರ ಸಾಮಗ್ರಿಗಳ ಬೆಲೆ ದಿನೇ ದಿನೇ ಏರುತ್ತಿದೆ ಅದನ್ನು ಪ್ರತಿಭಟಿಸುತ್ತಿಲ್ಲ. ಶಾಲಾ ಶುಲ್ಕ ಮಾತ್ರಕ್ಕೆ ಏಕೆ ಈ ಕಡಿವಾಣ?

**10) ಪಠ್ಯಪುಸ್ತಕಗಳ ಗೊಂದಲ :** ಶಾಲೆ ಪ್ರಾರಂಭವಾದ ಒಂದೆರಡು ತಿಂಗಳವರೆಗೂ ಪಠ್ಯಪುಸ್ತಕಗಳು ಸಿಗುವುದಿಲ್ಲ. ಇಲ್ಲಿಯೂ ಖಾಸಗಿ ಶಾಲೆಯವರಿಗೆ ಮಲತಾಯಿ ಧೋರಣೆ. ಜನವರಿ-ಫೆಬ್ರವರಿಯಲ್ಲಿ ಬೇಡಿಕೆ ಸಲ್ಲಿಸಿ ಮುಂಗಡ ಹಣ ಪಾವತಿಸಬೇಕು. ಹಿಂದೆ ಪಠ್ಯಪುಸ್ತಕಗಳು ಅಂಗಡಿಗಳಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ದೊರೆಯುತ್ತಿದ್ದವು. ಮಕ್ಕಳು ತಮಗೆ ಬೇಕಾದ ಪುಸ್ತಕಗಳನ್ನು ಖರೀದಿಸುತ್ತಿದ್ದರು. ಈಗ ಶಾಲೆಯವರಿಗೆ ಇದೊಂದು ಹೊರೆ. ಮಕ್ಕಳಿಂದ ಹಣ ವಸೂಲಿ... ನಂತರ ಕರೆದಾಗ ಕ್ಯೂ ನಿಂತು ಪುಸ್ತಕಗಳನ್ನು ನಮ್ಮದೇ ಖರ್ಚಿನಲ್ಲಿ ತರುವುದು. ಮಾರಾಟ ಪುಸ್ತಕಗಳ ಬದಲಿಗೆ ಉಚಿತ ವಿತರಣೆ ಪುಸ್ತಕಗಳನ್ನು ಕೊಟ್ಟರೂ ಬಾಯ್ಮುಚ್ಚಿಕೊಂಡಿರಬೇಕು. ಹರಿದ, ಪ್ರಿಂಟ್ ಇಲ್ಲದ ಪುಸ್ತಕಗಳನ್ನು ಕೊಟ್ಟರೂ ಪ್ರಸಾದವೆಂಬಂತೆ ಸ್ವೀಕರಿಸಬೇಕು. ಖಾಸಗಿ ಸಂಸ್ಥೆಗಳಿಗೆ ಏಕಿಂಥ ಶಿಕ್ಷೆ? ಪಠ್ಯ ಪುಸ್ತಕಗಳನ್ನು ಮುಕ್ತ ಮಾರುಕಟ್ಟೆಗೆ ಬಿಟ್ಟರೆ ಶಿಕ್ಷಕರ ಹೊರೆ ತಪ್ಪೀತು!

ಇಷ್ಟೆಲ್ಲಾ ಗೊಂದಲಗಳ ನಡುವೆ ಇಲಾಖೆಯ ಜೊತೆಗೆ ಕೈ ಜೋಡಿಸುವ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಇಲ್ಲ ಸಲ್ಲದ ಗೂಬೆ ಕೂರಿಸುವ ಪರಿಪಾಠ ನಿಲ್ಲಬೇಕು. ಗುರು-ಶಿಷ್ಯ ಪರಂಪರೆಯ ಪವಿತ್ರ ಭಾವನೆ ಇರುವ ಸನ್ನಿವೇಶದಲ್ಲಿ ಅಸಹ್ಯವಾದ ಮಾತುಗಳಿಂದ ನಿಂದಿಸುವ, ಮಕ್ಕಳ ಮುಂದೆ ತುಚ್ಛವಾಗಿ ಬಿಂಬಿಸುವ ಕಾರ್ಯಕ್ರಮಗಳು ನಿಲ್ಲಬೇಕು. ಯಾರು ತಪ್ಪಿತಸ್ಥರೋ ಅವರನ್ನು ಮಾತ್ರ ಪ್ರಶ್ನಿಸಿ, ವಿಚಾರಿಸಿ. ಎಲ್ಲವನ್ನೂ ಸಾರ್ವತ್ರೀಕರಣ ಗೊಳಿಸಬೇಡಿ. ವಿದ್ಯಾದೇಗುಲಗಳನ್ನು, ವಿದ್ಯಾ ಗುರುಗಳನ್ನು ಗೌರವಿಸಿ ಕಾಪಾಡುವ ಕಾರ್ಯ ನಡೆಯಲಿ.

# ಕೌಶಲ್ಯ ಕರ್ನಾಟಕ ಯೋಜನೆಗೆ ಅರ್ಜಿ ಆಹ್ವಾನ

ದಾವಣಗೆರೆ, ಜು.21- ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಹರಿಹರ ಕೇಂದ್ರದಲ್ಲಿ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮೂಲಕ 10 ರಿಂದ 35 ವರ್ಷದೊಳಗಿನ ನಿರುದ್ಯೋಗಿ ಯುವಕ, ಯುವತಿಯರಿಗೆ ವಿವಿಧ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆಯ ದಿನವಾಗಿದ್ದು, ಹೆಚ್ಚಿನ ವಿವರಗಳಿಗೆ ಫೋನ್: 08192-243937 / 296840, ಮೊಬೈಲ್ : 99169 08111, ಸಂಪರ್ಕಿಸಬಹುದು.


**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2 %) ಅರ್ಧ ಪರ್ಸೆಂಟ್ ಕಮೀಷನ್ ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409

**ಹೊಸ ಹೊಸ ಮನೆಗಳು ಮಾರಾಟಕ್ಕಿವೆ**
30x50 North ನಾಲ್ಕು ಬೆಡ್ ರೂಂ ಡ್ಯೂಪ್ಲೆಕ್ಸ್ ಮನೆ ಸರಸ್ವತಿ ಬಡಾವಣೆಯಲ್ಲಿ,
30x40 South, ಡ್ಯೂಪ್ಲೆಕ್ಸ್ 3 ಬೆಡ್ ರೂಂ ಮನೆ ಎಸ್.ಎಸ್. ಬಿ ಬ್ಲಾಕ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ ದಾನಿಗಳು
ಡಾ. ನಿವೇದಿತಾ ಎಂ.
ಆರತಿ ಕ್ಲಿನಿಕ್, ದಾವಣಗೆರೆ.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಿಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099

**ಬೇಕಾಗಿದ್ದಾರೆ**
ಮೆಡಿಕಲ್ ಸ್ಟೋರ್ ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
99725 23910

**ಮನೆ ಬಾಡಿಗೆಗೆ ಇದೆ**
#853/6, 1ನೇ ಹಂತ, 2ನೇ ಮೇನ್, 6ನೇ ಕ್ರಾಸ್, ಶಿವಕುಮಾರಸ್ವಾಮಿ ಬಡಾವಣೆ, 1ನೇ ಫ್ಲೋರ್, ಸಿಂಗಲ್ ಬೆಡ್ ರೂಂ ಮನೆ ಹಾಗೂ ಗ್ರೌಂಡ್ ಫ್ಲೋರ್‌ನಲ್ಲಿ ಸೀಟ್ ಮನೆ, ವಿಶಾಲವಾದ ಪಾರ್ಕಿಂಗ್, ಕಾರ್ಪೊರೇಷನ್/ಬೋರ್ ನೀರಿನ ವ್ಯವಸ್ಥೆ ಇರುವ ಮನೆಗಳಿವೆ.
63618 93176, 82176 21050

**ಮಗು ನೋಡಿಕೊಳ್ಳಲು ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಒಂದು ವರ್ಷದ ಮಗುವನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿರಿ
98808 12989
83100 73553

**ಮಾರಾಟಕ್ಕಿದೆ**
ನಗರದ ಹೃದಯ ಭಾಗದಲ್ಲಿ ಸುಮಾರು 10 ವರ್ಷ ಹಳೆಯ ಚಾಲ್ತಿಯಲ್ಲಿರುವ ಡಿಟಿಪಿ ಸೆಂಟರ್ ಫರ್ನಿಚರ್ ಸಹಿತ ಮಾರಾಟಕ್ಕಿದೆ.
ಸಂಪರ್ಕಿಸಿ :
78924 66642

**JOBS**
MCS ACADEMY
Training & Placement Cell
98444 92888

**ಬಾಡಿಗೆಗೆ ಇದೆ**
900 sqft ಇರುವ ಸೆಲ್ಲರ್ ಮಳಿಗೆ ಗೋಡೌನ್‌ಗೆ ಬಾಡಿಗೆಗೆ ಇದೆ.
KSRTC ಬಸ್ ಸ್ಟ್ಯಾಂಡ್ ಹಿಂಭಾಗ, ಚೌಡಮ್ಮ ದೇವಸ್ಥಾನದ ಎದುರು, ದಾವಣಗೆರೆ.
98808 19226
94486 66345

**JOB OPPORTUNITY**
We need a
Tally Faculty (Female)
Any Graduate with 0-2 years can send their CV within 24-7-21 to
*hardsoftdvg@gmail.com* or
call us: 97312 18567

**HR BPO JOB**
in Davangere
Female Candidates with fluent in English.
Any qualification
93802 29199

**ಬೇಕಾಗಿದ್ದಾರೆ**
ಮನೆಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡಲು ಲೇಡಿ ಟೀಚರ್ ಬೇಕಾಗಿದ್ದಾರೆ. ಸಮಯ ಮಧ್ಯಾಹ್ನ 2 ರಿಂದ 6 ರವರೆಗೆ. ಮನೆ ವಿಳಾಸ: ಹೈಟೆಕ್ ಹಾಸ್ಪಿಟಲ್ ಹತ್ತಿರ. ಆಸಕ್ತಿ ಇರುವ ಮಹಿಳಾ ಶಿಕ್ಷಕರು ಈ ನಂಬರ್‌ಗೆ ಸಂಪರ್ಕಿಸಿ
83102 57998

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
(Prefered Main Road)
74112 50447

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಡಾಲರ್ಸ್ ಕಾಲೋನಿಯಲ್ಲಿ 30x57+56=1695 ಅಳತೆಯ ನಿವೇಶನ ಮಾರಾಟಕ್ಕಿದೆ. (ದಕ್ಷಿಣ ಮುಖ) 100% ಸರಿಯಾದ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳಿವೆ.
ಸಂಪರ್ಕಿಸಿ :
ಮೊ: 99006 37763

**Duda Approved**
sites at Just Rs. 4 Laks in Harihara.
Limited sites only.
80886 73838

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯುಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
72593 59861, 99863 45266

**ಹೋಟೆಲ್ ಸಾಮಗ್ರಿಗಳು ಮಾರಾಟಕ್ಕಿವೆ**
ಹರಪನಹಳ್ಳಿ ಪಟ್ಟಣದ ಪುರಸಭೆ ಎದುರುಗಡೆ ಇರುವ ರಾಮ ದರ್ಶನ ಹೋಟೆಲ್‌ನ ಸುಸ್ಥಿತಿಯಲ್ಲಿರುವ ಸಾಮಾನುಗಳು ಮಾರಾಟಕ್ಕಿವೆ. ಸಂಪರ್ಕಿಸಿ
99725 60406

**ಬಾಡಿಗೆಗೆ/ಲೀಸ್‌ಗೆ**
ಸಿಂಗಲ್ ಬೆಡ್ ರೂಂ ಮನೆ
#1928/74, 'ಚೈತ್ರ ನಿವಾಸ'
ಬಾಪೂಜಿ ಎಂಬಿಎ ಕಾಲೇಜ್, ಮೇನ್ ರೋಡ್, ದಾವಣಗೆರೆ.
ಮೊ: 94484 39667

**2 BHK ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿ ಪೂರ್ವ ಬಾಗಿಲು ಇರುವ 2BHK ಮನೆ ಸರಸ್ವತಿ ನಗರ, ವಿದ್ಯಾ ನಂದನ ಸ್ಕೂಲ್ ಹತ್ತಿರ ಬಾಡಿಗೆಗೆ ಇದೆ.
97405 04217

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**COMMERCIAL SITE FOR SALE**
Site No. 8, size 20x80 Gujari layout maganahally main road (double road) opposite, aqsa masjid complex near, JDS office, Davangere.
83106 39057

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಉದ್ಯೋಗವಕಾಶ**
ನಮ್ಮ ಹೋಂ ನರ್ಸಿಂಗ್ ಸಂಸ್ಥೆಯಲ್ಲಿ ವಯೋವೃದ್ಧರನ್ನು ಮತ್ತು ರೋಗಿಗಳನ್ನು ನೋಡಿಕೊಳ್ಳಲು ಯುವತಿಯರು ಮತ್ತು ವಿಧವೆಯರು ಬೇಕಾಗಿದ್ದಾರೆ.
91486 83185, 97426 64915

**ತಕ್ಷಣ ಬೇಕಾಗಿದ್ದಾರೆ**
ಬಿಲ್ಲಿಂಗ್ ಆಪರೇಟರ್
ಕ್ಯಾಷಿಯರ್
ಲಿಕ್ಕರ್ ಪ್ಯಾರಡೈಸ್
ಶಾಮನೂರು ರಸ್ತೆ, ದಾವಣಗೆರೆ
ಸಂಪರ್ಕಿಸಿ: 70191 37858

**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ ಡೆಲಿವರಿ ಬಾಯ್ ಕೆಲಸ ಮಾಡಲು ಮತ್ತು ಕಂಪ್ಯೂಟರ್ ಜ್ಞಾನ ಇರುವ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
97385 23711

**GANGOTRI PLAZA COMMERCIAL BUILDING FOR RENT**
@ Mama's Joint Road, Opp. Shilpa Diagnostic, MCC 'B' Block, Davangere.
1st Floor 1600 Sq.ft.
2nd Floor 1600 Sq.ft
Basement 1300 Sq.ft
Lift facility available.
NORTH FACE BUILDING
98455 55098

**ಹರಾಜು ಪ್ರಕಟಣೆ**
ನಮ್ಮ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದೇವರಬೆಳಕೆರೆ, ಹರಿಹರ ತಾ. ಇದರ 4 ಶಿಥಿಲಗೊಂಡ ಶಾಲಾ ಕೊಠಡಿಗಳ ಹೆಂಚು, ಮರದ ತೀರು, ಕಬ್ಬಿಣ ಇತರೆ ಪರಿಕರಗಳೊಂದಿಗೆ ನೆಲಸಮ/ ತೆರವುಗೊಳಿಸುವ ಸಂಬಂಧವಾಗಿ ಮಾನ್ಯ ಇಲಾಖೆ ಹಾಗು ಗ್ರಾಮ ಪಂಚಾಯಿತಿ ಅನುಮತಿ/ಆದೇಶಗಳೊಂದಿಗೆ ತೆರೆದ ಹರಾಜು ಪ್ರಕ್ರಿಯೆಗೆ ಚಾಲನೆ ನೀಡಿದ್ದು **ಸದರಿ ಹರಾಜು ದಿನಾಂಕ 27.07.2021ರ ಮಂಗಳವಾರ ಬೆಳಿಗ್ಗೆ ಶಾಲಾ ಆವರಣದಲ್ಲಿ ನಡೆಸಲಾಗುತ್ತದೆ** ಮತ್ತು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಆಸಕ್ತ ಬಿಡ್‌ದಾರರು **ನಿಗದಿತ ದಿನಾಂಕದೊಳಗಾಗಿ 2000 ರೂ ಇಎಂಡಿ ಮೊತ್ತವನ್ನು** ಶಾಲಾ ಕಛೇರಿಯಲ್ಲಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ ಎಂದು ಶಾಲಾ ಆಡಳಿತ ಮಂಡಳಿ ಹಾಗೂ ಗ್ರಾಮ ಪಂಚಾಯಿತಿ ಪದಾಧಿಕಾರಿಗಳು ತಿಳಿಸಿರುತ್ತಾರೆ.

ಬಿ.ತಿಪ್ಪೇಶ್
ಅಧ್ಯಕ್ಷರು, ಎಸ್.ಡಿ.ಎಂ.ಸಿ ಸ.ಹಿ.ಪ್ರಾ ಶಾಲೆ ದೇವರಬೆಳಕೆರೆ ಹರಿಹರ ತಾ.

ಸುಲೋಚನ ಎಂ.ಕೆ
ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದೇವರಬೆಳಕೆರೆ, ಹರಿಹರ ತಾ.

# ಕಸಾಪದಿಂದ ಇಂದು ಟಿ. ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ



ಬೆಂಗಳೂರು,ಜು.21- ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸಾಹಿತ್ಯ ದತ್ತಿ ಪ್ರಶಸ್ತಿಗಳ ಪ್ರದಾನ ಸಮಾರಂಭವು ನಾಳೆ ದಿನಾಂಕ 22ರ ಗುರುವಾರ ಮಧ್ಯಾಹ್ನ 3.30ಕ್ಕೆ ಇಲ್ಲಿನ ಚಾಮರಾಜಪೇಟೆಯಲ್ಲಿರುವ ಪರಿಷತ್ತಿನ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ.


ದಾವಣಗೆರೆ ಜಿಲ್ಲೆಯ ಹೆಸರಾಂತ ಹಿರಿಯ ಸಾಹಿತಿಯಾಗಿದ್ದ ಶ್ರೀಮತಿ ಟಿ. ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿಯನ್ನು ಉಪನ್ಯಾಸಕರೂ, ಗಾಯಕರೂ, ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಮಹಿಳಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿರುವ ಡಾ. ಅಕ್ಕ ಗಂಗಾಂಬಿಕಾ ಪಾಟೀಲ ಅವರಿಗೆ ನೀಡಲಾಗಿದೆ.

ಮನೋಹರಿ ಪಾರ್ಥಸಾರಥಿ 'ಮನುಶ್ರೀ' ದತ್ತಿ, ಪ್ರಶಸ್ತಿಯನ್ನು ನಾಡಿನ ಹಿರಿಯ ಅಂಕಣಕಾರರೂ, ಸಣ್ಣ ಕಥೆಗಾರರೂ, ಚಲನಚಿತ್ರ ಗೀತ ರಚನಾಕಾರರೂ ಆದ ಡಾ. ಜಯಂತ್ ಕಾಯ್ಕಿಣಿ ಅವರಿಗೆ ಕೊಡಲಾಗಿದೆ.

ಪಂಕಜ ಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿಯು ಕಾವ್ಯ, ನಾಟಕ, ಅನುವಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸು ತ್ತಿರುವ ಬೆಂಗಳೂರು ದೂರದರ್ಶನದ ಕಾರ್ಯಕ್ರಮ ನಿರ್ವಾಹಕರಾದ ಶ್ರೀಮತಿ ಹೆಚ್.ಎನ್. ಆರತಿ ಅವರಿಗೆ ಲಭಿಸಿದೆ.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮನು ಬಳಿಗಾರ ಅವರ ಅಧ್ಯಕ್ಷತೆಯಲ್ಲಿ ನಾಡಿನ ಹಿರಿಯ ಸಾಹಿತಿ ಡಾ. ಹೆಚ್.ಎಸ್. ವೆಂಕಟೇಶಮೂರ್ತಿ ಅವರು ಪ್ರಶಸ್ತಿ ಪ್ರದಾನ ಮಾಡುವರು.

# ಹಂದಿಗಳ ಸ್ಥಳಾಂತರಕ್ಕೆ ಶೀಘ್ರ ಕ್ರಮ : ಜಿಲ್ಲಾಧಿಕಾರಿ ಬೀಳಗಿ



ದಾವಣಗೆರೆ, ಜು. 21- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಂದಿಗಳ ಹಾವಳಿ ನಿಯಂತ್ರಣದ ನಿಟ್ಟಿನಲ್ಲಿ ಶೀಘ್ರದಲ್ಲಿಯೇ ಹಂದಿಗಳ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗುವುದು, ಇದಕ್ಕಾಗಿ ಅಗತ್ಯ ಭೂಮಿಯನ್ನು ಒದಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಹಂದಿಗಳ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೊನ್ನೆ ಏರ್ಪಡಿಸಲಾಗಿದ್ದ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಹಂದಿ ಹಾವಳಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ರಸ್ತೆಗಳಲ್ಲಿ ಬಿಡಾಡಿ ಹಂದಿಗಳ ಓಡಾಟದಿಂದಾಗಿ ಸಾಕಷ್ಟು ಅಪಘಾತಗಳೂ ಸಂಭವಿಸಿವೆ. ಅಲ್ಲಲ್ಲಿ ಮಕ್ಕಳ ಮೇಲೂ ಹಂದಿಗಳು ದಾಳಿ ಮಾಡಿ ಗಾಯಗೊಳಿಸಿ ರುವ ಬಗ್ಗೆ ಸಾರ್ವಜನಿಕರಿಂದಲೂ ಬಹಳಷ್ಟು ದೂರುಗಳಿವೆ. ಹೀಗಾಗಿ ಹಂದಿಗಳ ಹಾವಳಿಯನ್ನು ತಪ್ಪಿಸಲು ವರಾಹ ಶಾಲೆ ನಿರ್ಮಾಣಕ್ಕೆ ಜಿಲ್ಲಾಡಳಿತ ಅಂತಿಮ ನಿರ್ಧಾರ ಕೈಗೊಂಡಿದೆ. ಈ ಬಗ್ಗೆ ಚರ್ಚಿಸಲು ಹಂದಿ ಮಾಲೀಕರ ಸಂಘದವರಿಗೆ ಸಭೆಗೆ ಆಹ್ವಾನಿಸಲಾಗಿತ್ತು. ಆದರೆ ಅವರು ಬಂದಿಲ್ಲ. ಹೀಗಾಗಿ ಜಿಲ್ಲಾಡಳಿತದಿಂದಲೇ ಅಂತಿಮ ನಿರ್ಧಾರ ಕೈಗೊಳ್ಳಲಾಗಿದೆ. ವರಾಹ ಶಾಲೆ ನಿರ್ಮಾಣಕ್ಕೆ ಕೆಲವೆಡೆ ಭೂಮಿ ಗುರುತಿಸಲಾಗಿದ್ದು, ನಗರ ಪಾಲಿಕೆಗೆ ಭೂಮಿ ಹಸ್ತಾಂತರಿಸುವ ಕಾರ್ಯ ತ್ವರಿತ ಗೊಳಿಸಲಾಗುವುದು ಎಂದವರು ಹೇಳಿದರು.

ನಗರದಲ್ಲಿ ಸಂಗ್ರಹಿಸಲಾಗುವ ಹಸಿ ಕಸವನ್ನು ವರಾಹ ಶಾಲೆಗೆ ಒದಗಿಸಲು ನಿರ್ಧರಿಸಲಾಗಿದೆ ಎಂದರು. ಇದಕ್ಕೆ ಪ್ರತಿ ಕ್ರಿಯಿಸಿದ ನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಪಾಲಿಕೆಗೆ ಕಸ ಸಾಗಾಣಿಕೆಗೆ ಸಂಬಂಧಿಸಿದ 13 ಹೊಸ ಆಟೋ ಟಿಪ್ಪರ್‌ಗ ಳನ್ನು ಖರೀದಿಸಲಾಗಿದ್ದು, ಹಸಿ ಕಸ ಸಾಗಾಟಕ್ಕೆ ಯಾವುದೇ ಸಮಸ್ಯೆಯಿಲ್ಲ ಎಂದರು.

ವರಾಹ ಶಾಲೆ ನಿರ್ಮಿಸಿದ ಬಳಿಕ ಹಂದಿಗಳ ಸ್ಥಳಾಂತರಕ್ಕೆ ಮಾಲೀಕರುಗಳಿಗೆ ಸಮಯ ನಿಗದಿಪಡಿಸ ಲಾಗುವುದು. ಇಲ್ಲದಿದ್ದಲ್ಲಿ, ನಗರದಲ್ಲಿ ಕಂಡುಬರುವ ಹಂದಿಗಳನ್ನು ಪಾಲಿಕೆಯಿಂದಲೇ ಹಿಡಿದು, ಮಾರಾಟ ಮಾಡಲು ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಸಿದರು.

ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಮಾತನಾಡಿ, ಸಾಂಕ್ರಾಮಿಕ ರೋಗಗಳು ವ್ಯಾಪಕ ವಾಗಿರುವ ಇಂತಹ ಸಂದರ್ಭದಲ್ಲಿಯೇ ವರಾಹ ಶಾಲೆ ನಿರ್ಮಾಣಕ್ಕೆ ನಿರ್ಧರಿಸುವುದು ಸೂಕ್ತವಾಗಿದೆ. ಕೆಲವರಿಂದ ಇದಕ್ಕೆ ಆಕ್ಷೇಪಣೆಗಳು ಬಂದರೂ, ಅವುಗಳನ್ನು ನಿವಾರಿಸಿ, ಮನವೊಲಿಸಿ ಅನುಷ್ಠಾನಕ್ಕೆ ತರಲೇಬೇಕು. ವರಾಹ ಶಾಲೆಗೆ ಭೂಮಿ ನಿಗದಿಪಡಿಸುವಾಗ ಜನವಸತಿ ಪ್ರದೇಶದಿಂದ ದೂರವಿದ್ದರೆ ಒಳಿತು ಎಂದು ಸಲಹೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಅವರು ಮಾತನಾಡಿ, ನಗರದ ರಸ್ತೆಗಳಲ್ಲಿ ಹಂದಿಗಳ ಓಡಾಟದಿಂದಾಗಿ ಅಪಘಾತ ಪ್ರಕರಣಗಳು ಹೆಚ್ಚುತ್ತಿರುವುದು ಇದರ ಗಂಭೀರತೆಗೆ ನಿದರ್ಶನ ವಾಗಿದೆ. ವರಾಹ ಶಾಲೆ ಬಳಿ ವಾಸನೆ ಬರುತ್ತದೆ ಎಂಬ ಬಗ್ಗೆ ಆಕ್ಷೇಪಣೆಗಳಿರುತ್ತವೆ. ಹೀಗಾಗಿ ಹಂದಿಗಳ ಸಾಕಾಣಿಕೆಯಲ್ಲಿ ವಾಸನೆ ಬಾರದಂತೆ ವಿದೇಶಗಳಲ್ಲಿ ಕೈಗೊಂಡಿರುವ ವಿಧಾನಗಳನ್ನು ಅರಿತು, ಇಂತಹ ವಿಧಾನಗಳನ್ನು ಇಲ್ಲಿಯೂ ಅನುಸರಿಸಬೇಕು ಎಂದರು.

ಸಭೆಯಲ್ಲಿ ನಗರ ಪಾಲಿಕೆ ಸಾರ್ವಜನಿಕ ಆರೋಗ್ಯ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ. ಗೋಣೆಪ್ಪ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ರಶ್ಮಿ ಹೆಣ್ಣು ಮಕ್ಕಳ ಶಾಲೆಗೆ ಪ್ರವೇಶ

ದಾವಣಗೆರೆ, ಜು.21- ಡಾ. ಡಿ. ಪರ್ವತಪ್ಪ ಮೆಮೋರಿಯಲ್ ಟ್ರಸ್ಟ್ ವತಿಯಿಂದ ನಡೆಸುತ್ತಿರುವ ರಶ್ಮಿ ಹೆಣ್ಣು ಮಕ್ಕಳ ಉಚಿತ ವಸತಿಯುತ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ 1 ರಿಂದ 9ನೇ ತರಗತಿವರೆಗೆ ಓದ ಬಯಸುವ ಹೆಣ್ಣು ಮಕ್ಕಳಿಗೆ ಪ್ರವೇಶಾತಿಯನ್ನು ಆರಂಭಿಸಲಾಗುವುದು.

ಅನಾಥ, ನಿರ್ಗತಿಕ, ಕಡುಬಡವ ಹೆಣ್ಣು ಮಕ್ಕಳಿಗೆ ಮಾತ್ರ ಅವಕಾಶವಿದೆ. ವಿವರಕ್ಕೆ ಸಂಪರ್ಕಿಸಿ : ಮೊ: 9535735913, 9916362288.

# ಬದಲಾವಣೆ ವರದಿ : ಸಂತೋಷ್-ರೇವಣ್ಣ ಭೇಟಿ

ಬೆಂಗಳೂರು, ಜು. 21 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಾಯಕತ್ವ ಬದಲಾವಣೆ ಮುಂಚೂಣಿಗೆ ಬರುತ್ತಿದ್ದಂತೆ ಜೆಡಿಎಸ್ ನಾಯಕ ಹಾಗೂ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಬಿಜೆಪಿ ಸಂಘಟನಾ ಕಾರ್ಯದರ್ಶಿ ಸಂತೋಷ್ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲಕ್ಕೆ ಎಡೆಮಾಡಿದೆ.

ಸಂತೋಷ್ ಅವರೇ ರೇವಣ್ಣ ಅವರನ್ನು ದೆಹಲಿಗೆ ಕರೆಸಿಕೊಂಡು ಪ್ರಸಕ್ತ ರಾಜಕೀಯ ಸನ್ನಿವೇಶ ಹಾಗೂ ಮುಂದಿನ ಬೆಳವಣಿಗೆಗೆ ಸಂಬಂಧಿಸಿದಂತೆ ಚರ್ಚೆ ಮಾಡಿದ್ದಾರೆ ಎನ್ನಲಾಗಿದೆ.

ಯಡಿಯೂರಪ್ಪ ಬದಲಾವಣೆ ಖಚಿತವಾಗುತ್ತಿದ್ದಂತೆ, ವೀರಶೈವ ಮಠಾಧೀಶರು ಬಿಜೆಪಿ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಒಂದು ವೇಳೆ ಯಡಿಯೂರಪ್ಪ ಬಂಡಾಯ ಎದ್ದಿದ್ದೇ ಆದರೆ, ಕರ್ನಾಟಕದಲ್ಲಿ ಬಿಜೆಪಿ ಸರ್ಕಾರವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಸಂತೋಷ್ ಮುಂದಾಲೋಚನೆ ಮಾಡಿದ್ದಾರೆ ಎನ್ನಲಾಗಿದೆ.


ಜೆಡಿಎಸ್ ಶಾಸಕಾಂಗ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಈ ಸಂದಿಗ್ಧ ಸ್ಥಿತಿಯಲ್ಲಿ ಮಧ್ಯೆ ಪ್ರವೇಶ ಮಾಡಬಾರದು ಎಂದು ತಮ್ಮ ಸಹೋದರ ರೇವಣ್ಣನವರನ್ನು ಕಳುಹಿಸಿಕೊಟ್ಟಿದ್ದಾರೆ ಎನ್ನಲಾಗಿದೆ.

ರೇವಣ್ಣ ತಮ್ಮ ಪುತ್ರ ಪ್ರಜ್ವಲ್ ರೇವಣ್ಣ ಅವರ ಜೊತೆಗೂಡಿ ಸಂತೋಷ್ ಅವರನ್ನು ಇಂದು ಮಧ್ಯಾಹ್ನ ಭೇಟಿ ಮಾಡಿ, ಗೌಪ್ಯ ಮಾತುಕತೆ ನಡೆಸಿದ್ದಾರೆ.

ಬಿಜೆಪಿಯ ಉನ್ನತ ಸ್ಥಾನದಲ್ಲಿ ಸಂತೋಷ್ ಮುಂಚೂಣಿಯಲ್ಲಿದ್ದಾರೆ. ಅವರ ಭೇಟಿಗೆ ಬಿಜೆಪಿ ಪಕ್ಷದ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರೇ ಸಮಯಕ್ಕಾಗಿ ಕಾಯುತ್ತಾರೆ. ಆದರೆ ರೇವಣ್ಣ ಅವರನ್ನು ಸಂತೋಷ್ ಅವರೇ ಕರೆಸಿಕೊಂಡು ಮಾತನಾಡುತ್ತಿರುವುದು ಕುತೂಹಲಕ್ಕೆ ಎಡೆಮಾಡಿದೆ.

ಇದರ ನಡುವೆ ಗಣಿ ಸಚಿವ ಮುರುಗೇಶ್ ನಿರಾಣಿ ಅವರನ್ನು ಬಿಜೆಪಿ ವರಿಷ್ಠರು ದೆಹಲಿಗೆ ಕರೆಸಿಕೊಂಡಿದ್ದಾರೆ.

# ಮಾಯಕೊಂಡವನ್ನು ಗುಡಿಸಲು ಮುಕ್ತ ಕ್ಷೇತ್ರವನ್ನಾಗಿಸಲು ಒತ್ತಾಯ



ದಾವಣಗೆರೆ, ಜು.21- ಮಾಯಕೊಂಡವನ್ನು ಗುಡಿಸಲು ಮುಕ್ತ ಕ್ಷೇತ್ರವನ್ನಾಗಿಸಿ ಮಾಡುವಂತೆ ಒತ್ತಾಯಿಸಿ, ಕೆಪಿಸಿಸಿ ಸದಸ್ಯ ಹೆಚ್.ದುಗ್ಗಪ್ಪ ಅವರು ಗೃಹ ಸಚಿವ ವಿ. ಸೋಮಣ್ಣ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮಾಯಕೊಂಡ ಕ್ಷೇತ್ರದಲ್ಲಿ ಹತ್ತಾರು ಸಾವಿರ ಗುಡಿಸಲು ಮನೆಗಳಿದ್ದು, ಕುರುಬ, ನಾಯಕ, ಮಾದಿಗ, ಚಲುವಾದಿ, ಲಂಬಾಣಿ, ಉಪ್ಪಾರ, ಕೊರಮ ಸೇರಿದಂತೆ ಎಲ್ಲಾ ಜನಾಂಗದ ಬಡ ಕುಟುಂಬಗಳು ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ.

ಬಿಸಲು, ಮಳೆ, ಗಾಳಿಗೆ ರಕ್ಷಣೆಯಿಲ್ಲದೇ ಜೀವನ ನಡೆಸಲು ಪರದಾಡುತ್ತಿದ್ದಾರೆ. ಮಳೆಗಾಲ ಬಂದರೆ, ಮನೆಯೊಳಗೆ ನೀರು ನುಗ್ಗಿ ಸೋರುವ ಮನೆಗಳಲ್ಲಿ ಜೀವನ ಮಾಡುವ ಪರಿಸ್ಥಿತಿ ಇದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ ವಸತಿ ಸಚಿವರಾಗಿದ್ದ ದಿ. ಅಂಬರೀಶ್ ಅವರು ಇಡೀ ರಾಜ್ಯವನ್ನು ಗುಡಿಸಲು ಮುಕ್ತ ಮಾಡಲು ಹಾಗೂ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ದಾವಣಗೆರೆ ಜಿಲ್ಲೆಯನ್ನು ಗುಡಿಸಲು ಮುಕ್ತ ಜಿಲ್ಲೆಯನ್ನಾಗಿಸಲು ಶಪಥ ಮಾಡಿದ್ದರು. ಅದರಂತೆಯೇ ಜಿಲ್ಲೆಯಲ್ಲಿ ಬಡವರಿಗೆ 15 ಸಾವಿರ ಆಶ್ರಯ ಮನೆಗಳ ನಿರ್ಮಾಣ ಮಾಡಿದ್ದರು. ಅಲ್ಲಿಂದ ಇಲ್ಲಿಯವರೆಗೆ ಆಶ್ರಯ ಮನೆಗಳು ನಿರ್ಮಾಣವಾಗದೇ ಸ್ಥಗಿತಗೊಂಡಿವೆ ಎಂದು ಅವರು ತಿಳಿಸಿದ್ದಾರೆ.

ಈಗ ಮಳೆಗಾಲವಾದ್ದರಿಂದ ಹೆಂಚಿನ ಮನೆಗಳು, ಗುಡಿಸಲುಗಳು ಸೋರುವುದರಿಂದ ಬಡಜನತೆಯ ಜೀವನ ಅಸ್ತವ್ಯಸ್ತವಾಗಿದೆ. ಅವರಿಗೆ ತಾತ್ಕಾಲಿಕ ವಾಸಕ್ಕೆ ಶೆಡ್ ವ್ಯವಸ್ಥೆ ಮಾಡಿ, ನಂತರ ಈಗ ವಾಸವಾಗಿರುವ ಅದೇ ಜಾಗದಲ್ಲಿ ಆರ್‌ಸಿಸಿ ಮನೆಗಳನ್ನು ನಿರ್ಮಾಣ ಮಾಡಿಕೊಡುವುದು ಅವಶ್ಯಕವಾಗಿದೆ. ಜಿಲ್ಲೆಯಲ್ಲಿರುವ ಎಲ್ಲಾ ಗುಡಿಸಲು ಮನೆಗಳನ್ನು ಆರ್‌ಸಿಸಿ ಮನೆ ನಿರ್ಮಾಣ ಮಾಡಿಕೊಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

# ನಗರದಲ್ಲಿ ನಾಳೆ ಶ್ರೀ ಶಿವಾನಂದ ತೀರ್ಥ ಅಧ್ಯಾತ್ಮ ಮಂದಿರದ ವಾರ್ಷಿಕೋತ್ಸವ



ದಾವಣಗೆರೆ, ಜು.21- ನಗರದ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಿವಾನಂದ ತೀರ್ಥ ಗುರು ಅಧ್ಯಾತ್ಮ ಮಂದಿರದ 35ನೇ ವಾರ್ಷಿಕೋತ್ಸವದ ಪ್ರತಿಷ್ಠಾಪನಾ ಸಂಸ್ಮರಣ ಮತ್ತು 108 ಕಳಶಗಳ ಶ್ರೀ ಸತ್ಯದತ್ತ ವ್ರತ ಮಹೋತ್ಸವ ನಾಡಿದ್ದು ದಿನಾಂಕ 23 ರ ಶುಕ್ರವಾರ ನಡೆಯಲಿದೆ.

ಅಂದು ಪ್ರಾತಃಕಾಲ ಕಾಕಡಾರತಿ, ಗಣಪತಿ ಪೂಜೆ, ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ನಡೆಯಲಿದೆ. ಬೆಳಿಗ್ಗೆ 10 ರಿಂದ 108 ಕಳಶಗಳ ಶ್ರೀ ಸತ್ಯ ದತ್ತವ್ರತ ಪೂಜಾ, ಮಧ್ಯಾಹ್ನ 12.30 ಕ್ಕೆ ಮಹಾಮಂಗಳಾರತಿ, ತೀರ್ಥ-ಪ್ರಸಾದ ವಿನಿಯೋಗ ಜರುಗಲಿದೆ.

ದಿ. ಶ್ರೀಮತಿ ಅಜ್ಜಂಪುರ ಭಾಗ್ಯಲಕ್ಷ್ಮಮ್ಮ, ದಿ. ಎ.ಆರ್. ಗೋವಿಂದಸ್ವಾಮಿ ಶ್ರೇಷ್ಠಿ ಇವರ ಮಕ್ಕಳಾದ ಎ.ಜಿ. ಮಂಜುನಾಥ್, ಎ.ಜಿ.ವೆಂಕಟೇಶ್ ಅವರಿಂದ ನಂದಾದೀಪ ಸೇವೆ ನಡೆಯುವುದು. ಶ್ರೀಮತಿ ಕಾಂತಲಕ್ಷ್ಮಮ್ಮ ಆರ್.ವಿ. ಗೋಪಾಲಕೃಷ್ಣ ಶ್ರೇಷ್ಠಿಯವರ ಮಕ್ಕಳು ಮತ್ತು ಶ್ರೀ ರಾಜನಹಳ್ಳಿ ಹರಿಹರಪ್ಪ ಟ್ರಸ್ಟ್ ಕಾರ್ಯಕಾರಿ ಸಮಿತಿ ಅವರುಗಳು ಕಾರ್ಯಕ್ರಮದ ವ್ಯವಸ್ಥಾಪಕರಾಗಿದ್ದಾರೆ.

# ನಗರದ ಸಾಯಿ ಮಂದಿರದಲ್ಲಿ ನಾಳೆ ಗುರುಪೂರ್ಣಿಮೆ



ದಾವಣಗೆರೆ, ಜು.21- ನಗರದ ಎಂ.ಸಿ.ಸಿ. ಎ ಬ್ಲಾಕ್ ನಲ್ಲಿರುವ ಶ್ರೀ ಸಾಯಿ ಮಂದಿರದಲ್ಲಿ ನಾಡಿದ್ದು ದಿನಾಂಕ 23 ರ ಶುಕ್ರವಾರ ಗುರು ಪೂರ್ಣಿಮೆ ಕಾರ್ಯಕ್ರಮವು ನಡೆಸಲಾಗುವುದು. ಕಾರ್ಯಕ್ರಮದಲ್ಲಿ ಸಾರ್ವಜನಿಕವಾಗಿ ಅಭಿಷೇಕ ಮಾಡಲು ಅವಕಾಶವಿರುವುದಿಲ್ಲ. ಅಂದು ಬೆಳಿಗ್ಗೆ 5 ಗಂಟೆಗೆ ಕಾಕಡಾರತಿ, 6 ಕ್ಕೆ ಪಂಚಾಮೃತ ಅಭಿಷೇಕ, 9 ಗಂಟೆಗೆ ದೀಪಾರಾಧನೆ ಮತ್ತು ಧ್ವಜಾರೋಹಣ ನಡೆಯುವುದು. ಮಧ್ಯಾಹ್ನ 12 ಗಂಟೆಗೆ ಮಧ್ಯಾಹ್ನಾರತಿ, ಸಂಜೆ 6.30 ಕ್ಕೆ ಧೂಪಾರತಿ ನಡೆಯುವುದು. ರಾತ್ರಿ 8.30 ಕ್ಕೆ ಪಲ್ಲಕ್ಕಿ ಉತ್ಸವ (ಮಂದಿರದ ಒಳಭಾಗದಲ್ಲಿ), 10 ಗಂಟೆಗೆ ಶೇಜಾರತಿ ನಡೆಯಲಿದೆ.



**ಮಳೆ : ಸರಸ್ವತಿ ನಗರದಲ್ಲಿ ನೆಲಕ್ಕುರುಳಿದ ಮರ**

ದಾವಣಗೆರೆ,ಜು.21- ನಗರದಲ್ಲಿ ಸತತವಾಗಿ ಸುರಿದ ಮಳೆಯಿಂದಾಗಿ ನಗರ ಪಾಲಿಕೆಯ 33ನೇ ವಾರ್ಡಿನ ಸರಸ್ವತಿ ನಗರ 'ಬಿ' ಬ್ಲಾಕ್ ನಲ್ಲಿ ನೆಲಕ್ಕುರುಳಿದ ಮರವನ್ನು ಆ ವಾರ್ಡಿನ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಪಾಲಿಕೆ ಸಿಬ್ಬಂದಿ ಮೂಲಕ ತೆರವುಗೊಳಿಸಿದರು.

# ಎಂ.ಬಿ. ಅಯ್ಯನಹಳ್ಳಿ : ಚಿರತೆ ದಾಳಿ



ಕೂಡ್ಲಿಗಿ, ಜು.21- ಗ್ರಾಮದಲ್ಲಿ ಮನೆಯ ಮುಂದೆ ಮಲಗಿದ್ದ ನಾಯಿಯ ಮೇಲೆ ಚಿರತೆಯೊಂದು ದಾಳಿ ಮಾಡಿರುವ ಘಟನೆ ತಾಲ್ಲೂಕಿನ ಎಂ.ಬಿ.ಅಯ್ಯನಹಳ್ಳಿಯಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಚಿರತೆ ದಾಳಿಯಿಂದ ನಾಯಿಯ ಕುತ್ತಿಗೆಗೆ ಗಾಯವಾಗಿದೆ. ಗ್ರಾಮದ ಕೆ. ವೀರಣ್ಣ ಎನ್ನುವವರ ಮನೆಯ ಮುಂದೆ ಮಲಗಿದ್ದ ನಾಯಿಯನ್ನು ಹಿಡಿಯಲು ಚಿರತೆ ಬಂದಿರುವುದನ್ನು ಸ್ಥಳೀಯರು ನೋಡಿದ್ದು, ಗ್ರಾಮದ ಜನರಲ್ಲಿ ಆತಂಕ ಮನೆ ಮಾಡಿದೆ.

ವಿಷಯ ತಿಳಿಯುತ್ತಿದ್ದಂತೆ ಗುಡೇಕೋಟೆ ಅರಣ್ಯ ಇಲಾಖೆಯ ಸಿಬ್ಬಂದಿ ಮಂಗಳವಾರ ರಾತ್ರಿಯೇ ಎಂ.ಬಿ. ಅಯ್ಯನ ಹಳ್ಳಿಗೆ ಆಗಮಿಸಿದ್ದು, ಚಿರತೆ ಕಾಣಿಸಿಕೊಂಡ ಜಾಗದಲ್ಲಿ ಪಟಾಕಿ ಸಿಡಿಸಿದ್ದಾರೆ.

ಚಿರತೆ ಮತ್ತೆ ಗ್ರಾಮಕ್ಕೆ ನುಗ್ಗಿ ಪ್ರಾಣಿಗಳು ಹಾಗು ಜನತೆಯ ಮೇಲೆ ದಾಳಿ ಮಾಡಬಹುದೆಂಬ ಅಂದಾಜಿದ್ದು, ಬೋನಿನ ವ್ಯವಸ್ಥೆ ಮಾಡಿ ಚಿರತೆಯನ್ನು ಸೆರೆ ಹಿಡಿಯುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಗ್ರಾಮಸ್ಥರಿಗೆ ತಿಳಿಸಿದ್ದಾರೆ.

# 24 ರಂದು ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಗುರು ಪೂರ್ಣಿಮೆ



ದಾವಣಗೆರೆ, ಜು.21- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇದೇ ದಿನಾಂಕ 24 ರ ಶನಿವಾರ ಗುರುಪೂರ್ಣಿಮೆ ಆಚರಿಸಲಾಗುವುದು ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ ಹೋಮ, ಹವನ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪಲ್ಲಕ್ಕಿ ಉತ್ಸವ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಮುದೇಗೌಡ್ರು ಶ್ರೀಮತಿ ಉಷಾ ಗಿರೀಶ್ ಹಾಗೂ ಕುಟುಂಬದವರು ಕಾರ್ಯಕ್ರಮದ ಸೇವಾಕರ್ತರಾಗಿದ್ದಾರೆ.

# ಹರಪನಹಳ್ಳಿ : ಆರ್ಯವೈಶ್ಯ ಸಮಾಜ ಅಧ್ಯಕ್ಷರಾಗಿ ದಯಾನಂದ ಶೆಟ್ರು



ಹರಪನಹಳ್ಳಿ, ಜು.21- ಆರ್ಯವೈಶ್ಯ ಸಮಾಜದ ನೂತನ ಅಧ್ಯಕ್ಷರಾಗಿ ಬಂಕಾಪುರ ದಯಾನಂದ ಶೆಟ್ರು ಆಯ್ಕೆಯಾಗಿದ್ದಾರೆ. ಗೌರವಾಧ್ಯಕ್ಷರಾಗಿ ಪಿ. ಅನಂತ ಶೆಟ್ರು, ಉಪಾಧ್ಯಕ್ಷರಾಗಿ ಹನುಮಂತ ಶೆಟ್ರು, ಕಾರ್ಯದರ್ಶಿ ಹೆಚ್.ಸಿ. ನಟೇಶ್ ಸ್ವಂತಾಲ್, ನಿರ್ದೇಶಕರಾಗಿ ಬಿ. ನಾಗೇಶ್ ಶೆಟ್ರು, ಬಬ್ಯಾ ನಾಗರಾಜ್ ಶೆಟ್ರು, ಪಿ. ಮುರಳೀಧರ್ ಶೆಟ್ರು, ಕೃಷ್ಣಮೂರ್ತಿ ಶೆಟ್ರು, ಬಾಲಾಜಿ ಜನಾದ್ರಿ, ಬಿ. ಸುಬ್ರಮ್ಮಣ್ಯ ಶೆಟ್ರು, ಕಡ್ಲಿ ಗುರುರಾಜ್, ಹೆಚ್‌ಎಲ್‌ಎನ್ ಶೆಟ್ರು, ಹೆಚ್. ರಮೇಶ್ ಶೆಟ್ರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ಹರಿಹರ: ಶ್ರದ್ಧಾ - ಭಕ್ತಿಯಿಂದ ಬಕ್ರೀದ್ ಆಚರಣೆ



ಹರಿಹರ, ಜು.21- ತ್ಯಾಗ ಮತ್ತು ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ತಾಲ್ಲೂಕಿನಾದ್ಯಂತ ಶ್ರದ್ಧಾ - ಭಕ್ತಿಯಿಂದ ಸರಳವಾಗಿ ಆಚರಿಸಿದರು.

ಮಕ್ಕಳು, ಹಿರಿಯರು ಹೊಸ ಬಟ್ಟೆ ಧರಿಸಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಮನೆಗಳಲ್ಲಿ ಮಹಿಳೆಯರು ವಿವಿಧ ಬಗೆಯ ಖಾರ, ಸಿಹಿ ಖಾದ್ಯ ಗಳನ್ನು ತಯಾರಿಸಿ, ಕುಟುಂಬ ಹಾಗೂ ಬಂಧು - ಬಳಗದವರ ಜತೆ ಸವಿದರು.

ಪ್ರತಿವರ್ಷ ಈ ಸಂದರ್ಭದಲ್ಲಿ ಮೆಕ್ಕಾ, ಮದೀನಾಗೆ ಹಜ್ ಯಾತ್ರೆ ಕೈಗೊಳ್ಳಲಾಗುತ್ತಿತ್ತು. ಆದರೆ, ಈ ಬಾರಿ ಕೋವಿಡ್ ಕಾರಣಕ್ಕೆ ಅನುಮತಿ ನೀಡಿಲ್ಲ. ಅಂದಾಜು ಪ್ರತಿ ವರ್ಷ 30 ರಿಂದ 40 ಲಕ್ಷ ಜನರು ಮೆಕ್ಕಾ, ಮದೀನಕ್ಕೆ ಭೇಟಿ ನೀಡುತ್ತಿದ್ದರು.


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಸ್ಥಿರ ಸೊತ್ತು ಜಮೀನುಗಳನ್ನು ನನ್ನ ಕಕ್ಷಿಗಾರರು ಸದರಿ ಜಮೀನುಗಳ ಮಾಲೀಕರಾದ ಶ್ರೀ ಗೋಲಿ ಸತ್ಯನಾರಾಯಣ ಬಿನ್ ಶ್ರೀ ಗೋಲಿ ವೆಂಕಟರಾವ್, ಶ್ರೀಮತಿ ಗೋಲಿ ಲಕ್ಷ್ಮೀ ಕೋಂ ಶ್ರೀ ಗೋಲಿ ಸತ್ಯನಾರಾಯಣ, ಗೋಲಿ ಶ್ರೀನಿವಾಸ ಬಿನ್ ಶ್ರೀ ಗೋಲಿ ವೆಂಕಟರಾವ್, ಕುಣೆಬೆಳಕೆರೆ ಗ್ರಾಮ, ಮಲೇಬೆನ್ನೂರು ಹೋಬಳಿ, ಹರಿಹರ ತಾಲ್ಲೂಕು ಇವರಿಂದ ಖರೀದಿಸಲು ಇಚ್ಚಿಸಿರುತ್ತಾರೆ.

ಸದರಿ ಷೆಡ್ಯೂಲ್ ಸೊತ್ತುಗಳನ್ನು ನನ್ನ ಕಕ್ಷಿಗಾರರು ಮೇಲ್ಕಂಡ ಶ್ರೀ ಗೋಲಿ ಸತ್ಯನಾರಾಯಣ ಬಿನ್ ಶ್ರೀ ಗೋಲಿ ವೆಂಕಟರಾವ್, ಶ್ರೀಮತಿ ಗೋಲಿ ಲಕ್ಷ್ಮೀ ಕೋಂ ಶ್ರೀ ಗೋಲಿ ಸತ್ಯನಾರಾಯಣ, ಗೋಲಿ ಶ್ರೀನಿವಾಸ ಬಿನ್ ಶ್ರೀ ಗೋಲಿ ವೆಂಕಟರಾವ್, ವ್ಯವಸಾಯಗಾರರು, ವಾಸ: ಕುಣಿಬೆಳಕೆರೆ ಗ್ರಾಮ, ಮಲೇಬೆನ್ನೂರು ಹೋಬಳಿ, ಹರಿಹರ ತಾಲ್ಲೂಕು ಇವರಿಂದ ಖರೀದಿಸುವ ಬಗ್ಗೆ ಯಾರದಾದರೂ ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 10 ದಿವಸಗಳ ಒಳಗಾಗಿ ಈ ಕೆಳಕಂಡವರಿಗೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ಸದರಿ 10 ದಿವಸಗಳ ಅವಧಿ ಮೀರಿ ಬರುವ ಯಾವುದೇ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ 10 ದಿವಸಗಳ ಅವಧಿ ನಂತರ ನನ್ನ ಕಕ್ಷಿಗಾರರು ಮೇಲ್ಕಂಡ ಶ್ರೀ ಗೋಲಿ ಸತ್ಯನಾರಾಯಣ ಬಿನ್ ಶ್ರೀ ಗೋಲಿ ವೆಂಟರಾವ್, ಶ್ರೀಮತಿ ಗೋಲಿ ಲಕ್ಷ್ಮೀ ಕೋಂ ಶ್ರೀ ಗೋಲಿ ಸತ್ಯನಾರಾಯಣ, ಗೋಲಿ ಶ್ರೀನಿವಾಸ ಬಿನ್ ಶ್ರೀ ಗೋಲಿ ವೆಂಕಟರಾವ್, ಕುಣಿಬೆಳಕೆರೆ ಗ್ರಾಮ, ಮಲೇಬೆನ್ನೂರು ಹೋಬಳಿ, ಹರಿಹರ ತಾಲ್ಲೂಕು, ಇವರಿಂದ ಷೆಡ್ಯೂಲ್ ಸ್ಥಿರ ಸೊತ್ತು ಜಮೀನುಗಳನ್ನು ರಿಜಿಸ್ಟರ್ಡ್ ಕ್ರಯ ಪತ್ರಗಳನ್ನು ಮಾಡಿಸಿಕೊಳ್ಳುವುದರ ಮೂಲಕ ಸೊತ್ತುಗಳ ಸ್ವಾಧೀನ ಹೊಂದುವರು.

ಸದರಿ ಅವಧಿ ಮೀರಿ ಬರಬಹುದಾದ ಯಾವುದೇ ತಂಟೆ, ತಕರಾರು, ವ್ಯಾಜ್ಯ ಆಕ್ಷೇಪಣೆ ವಗೈರೆಗಳು ನನ್ನ ಕಕ್ಷಿಗಾರರನ್ನು ಎಷ್ಟು ಮಾತ್ರಕ್ಕೂ ಪ್ರತಿಬಂಧಿಸುವುದಿಲ್ಲ ಹಾಗೂ ನನ್ನ ಕಕ್ಷಿಗಾರರು ಮೇಲ್ಕಂಡ ಶ್ರೀ ಗೋಲಿ ಸತ್ಯನಾರಾಯಣ ಬಿನ್ ಶ್ರೀ ಗೋಲಿ ವೆಂಕಟರಾವ್, ಶ್ರೀಮತಿ ಗೋಲಿ ಲಕ್ಷ್ಮೀ ಕೋಂ ಶ್ರೀ ಗೋಲಿ ಸತ್ಯನಾರಾಯಣ, ಗೋಲಿ ಶ್ರೀನಿವಾಸ ಬಿನ್ ಶ್ರೀ ಗೋಲಿ ವೆಂಕಟರಾವ್, ಕುಣಿಬೆಳಕೆರೆ ಗ್ರಾಮ, ಮಲೇಬೆನ್ನೂರು ಹೋಬಳಿ, ಹರಿಹರ ತಾಲ್ಲೂಕು, ಇವರಿಂದ ಪಡೆದುಕೊಳ್ಳುವ ಶುದ್ಧ ಕ್ರಯಪತ್ರಗಳನ್ನು ಎಳ್ಳಷ್ಟೂ ಬಾಧಿಸುವುದಿಲ್ಲ. ತಿಳಿಯುವುದು.

**ಷೆಡ್ಯೂಲ್-1 :** ಹರಿಹರ ತಾಲ್ಲೂಕು, ದೇವರಬೆಳಕೆರೆ ಗ್ರಾಮದ ಸರ್ಕಾರಿ ಸರ್ವೆ ನಂ. 90/ಪಿ ಒಟ್ಟು ವಿಸ್ತೀರ್ಣ ಎಕರೆ 9, ಗುಂಟೆ 27 ಆಕಾರ ರೂ. 17-21 ವುಳ್ಳ ಜಮೀನಿನ ಪೈಕಿ ಮಧ್ಯದ ಎಕರೆ 2 ಗುಂಟೆ 20 ಆಕಾರ ರೂ. 5-00ವುಳ್ಳ ಜಮೀನು ಹಾಗೂ ಇದಕ್ಕೆ ಚಕ್ಕುಬಂದಿ : **ಪೂರ್ವ** - ಮಾದಹಳ್ಳಿ ಕೆಂಚಪ್ಪನವರ ಜಮೀನು, **ಪಶ್ಚಿಮ** - ಪಟೇಲ್ ಗಂಗನಗೌಡರ ಜಮೀನು, **ಉತ್ತರ** - ಶ್ರೀಮತಿ ಗೋಲಿ ಲಕ್ಷ್ಮೀ ಕೋಂ ಶ್ರೀ ಗೋಲಿ ಸತ್ಯನಾರಾಯಣ ಇವರ ಎರಡು ಎಕರೆ ಇಪ್ಪತ್ತು ಗುಂಟೆ ಭಾಗದ ಜಮೀನು, **ದಕ್ಷಿಣ** - ಶ್ರೀ ಗೋಲಿ ಸತ್ಯನಾರಾಯಣರವರ ಇವರ ಇದೇ ನಂಬರಿನ ಎರಡು ಎಕರೆ ಭಾಗ.

**ಷೆಡ್ಯೂಲ್-2 :** ಹರಿಹರ ತಾಲ್ಲೂಕು, ದೇವರಬೆಳಕೆರೆ ಪಂಚಾಯ್ತಿ ಹದ್ದಿನಲ್ಲಿರುವ ಹರಿಹರ ತಾಲ್ಲೂಕು, ಮಲೇಬೆನ್ನೂರು ಹೋಬಳಿ, ಕುಣಿಬೆಳಕೆರೆ ಗ್ರಾಮದ ಸರ್ಕಾರಿ ಸರ್ವೆ ನಂ.90/ಪಿ 'ಬಿ' ಶ್ರೇಣಿಯ ಪೂರಾ ವಿಸ್ತೀರ್ಣ ಎಕರೆ 9 ಗುಂಟೆ 27 ಆಕಾರ ರೂ.17-21 ಪೈಸೆಯುಳ್ಳ ಜಮೀನಿನ ಪೈಕಿ ಮಧ್ಯದ ಎಕರೆ 2 ಗುಂಟೆ ಇಲ್ಲ ಆಕಾರ ರೂ.4-00 ವುಳ್ಳ ಜಮೀನು ಹಾಗೂ ಇದಕ್ಕೆ ಚಕ್ಕುಬಂದಿ: **ಪೂರ್ವ** - ಮಾದಹಳ್ಳಿ ಕೆಂಚಪ್ಪನವರ ಜಮೀನು, **ಪಶ್ಚಿಮ** - ಪಟೇಲ್ ಗಂಗನಗೌಡರ ಜಮೀನು, **ಉತ್ತರ** - ಶ್ರೀಮತಿ ಗೋಲಿ ಲಕ್ಷ್ಮೀ ಕೋಂ ಶ್ರೀ ಗೋಲಿ ಸತ್ಯನಾರಾಯಣ ಇವರ ಇದೇ ನಂಬರಿನ ಎರಡು ಎಕರೆ ಇಪ್ಪತ್ತು ಗುಂಟೆ ಭಾಗ. **ದಕ್ಷಿಣ** - ಶ್ರೀ ಗೋಲಿ ಶ್ರೀನಿವಾಸ ಇವರ ಇದೇ ನಂಬರಿನ ಎರಡು ಎಕರೆ ಇಪ್ಪತ್ತೇಳು ಗುಂಟೆ ಭಾಗ.

**ಷೆಡ್ಯೂಲ್-3 :** ಹರಿಹರ ತಾಲ್ಲೂಕು, ದೇವರಬೆಳಕೆರೆ ಮಂಡಲ ಪಂಚಾಯ್ತಿ ಹದ್ದಿನಲ್ಲಿರುವ ಹರಿಹರ ತಾಲ್ಲೂಕು, ಮಲೇಬೆನ್ನೂರು ಹೋಬಳಿ, ಕುಣಿಬೆಳಕೆರೆ ಗ್ರಾಮದ ಸರ್ಕಾರಿ ಸರ್ವೆ ನಂ.90/ಪಿ 'ಬಿ' ಶ್ರೇಣಿಯ ಪೂರಾ ವಿಸ್ತೀರ್ಣ ಎಕರೆ 9, ಗುಂಟೆ 27 ಆಕಾರ ರೂ.17-21 ಪೈಸೆಯುಳ್ಳ ಜಮೀನಿನ ಪೈಕಿ ಉತ್ತರ ಭಾಗದ ಎಕರೆ 2, ಗುಂಟೆ ಇಪ್ಪತ್ತು ಆಕಾರ ರೂ.5-00ವುಳ್ಳ ಜಮೀನು ಹಾಗೂ ಇದಕ್ಕೆ ಚಕ್ಕುಬಂದಿ: **ಪೂರ್ವ** - ಮಾದಹಳ್ಳಿ ಕೆಂಚಪ್ಪನವರ ಜಮೀನು, **ಪಶ್ಚಿಮ** - ಪಟೇಲ್ ಗಂಗನಗೌಡರ ಜಮೀನು, **ಉತ್ತರ** - ಹಳ್ಳ, **ದಕ್ಷಿಣ** - ಶ್ರೀಮತಿ ಗೋಲಿ ಲಕ್ಷ್ಮೀ ಕೋಂ ಶ್ರೀ ಗೋಲಿ ಸತ್ಯನಾರಾಯಣ ಇವರ ಇದೇ ನಂಬರಿನ ಎರಡು ಎಕರೆ ಇಪ್ಪತ್ತು ಗುಂಟೆ ಭಾಗ.

**ಷೆಡ್ಯೂಲ್-4 :** ಹರಿಹರ ತಾಲ್ಲೂಕು, ದೇವರಬೆಳಕೆರೆ ಪಂಚಾಯ್ತಿ ಹದ್ದಿನಲ್ಲಿರುವ ಹರಿಹರ ತಾಲ್ಲೂಕು, ಮಲೇಬೆನ್ನೂರು ಹೋಬಳಿ, ಕುಣಿಬೆಳಕೆರೆ ಗ್ರಾಮದ ಸರ್ಕಾರಿ ಸರ್ವೆ ನಂ.90/ಪಿ 'ಬಿ' ಶ್ರೇಣಿಯ ಪೂರಾ ವಿಸ್ತೀರ್ಣ ಎಕರೆ 9, ಗುಂಟೆ 27 ಆಕಾರ ರೂ.17-21 ಪೈಸೆಯುಳ್ಳ ಜಮೀನಿನ ಪೈಕಿ ದಕ್ಷಿಣ ಭಾಗದ ಎಕರೆ 2, ಗುಂಟೆ ಇಪ್ಪತ್ತೇಳು ಆಕಾರ ರೂ.5-00 ವುಳ್ಳ ಜಮೀನು ಹಾಗೂ ಇದಕ್ಕೆ ಚಕ್ಕುಬಂದಿ: **ಪೂರ್ವ** - ಮಾದಹಳ್ಳಿ ಕೆಂಚಪ್ಪನವರ ಜಮೀನು, **ಪಶ್ಚಿಮ** - ಪಟೇಲ್ ಗಂಗನಗೌಡರ ಜಮೀನು, **ಉತ್ತರ** - ಶ್ರೀ ಗೋಲಿ ಸತ್ಯನಾರಾಯಣ ಇವರ ಇದೇ ನಂಬರಿನ ಎರಡು ಎಕರೆ ಭಾಗ. **ದಕ್ಷಿಣ** - ಕೊಳ್ಳಿ ಹನುಮಂತಪ್ಪನವರ ಜಮೀನು.

**ಷೆಡ್ಯೂಲ್ - 5 :** ಹರಿಹರ ತಾಲ್ಲೂಕು, ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ ಹರಿಹರ ತಾಲ್ಲೂಕು, ಮಲೇಬೆನ್ನೂರು ಹೋಬಳಿ, ಕುಣಿಬೆಳಕೆರೆ ಗ್ರಾಮದ ಸರ್ಕಾರಿ ರಿ. ಸರ್ವೆ ನಂ.89/1 ರಲ್ಲಿ ಎಕರೆ ಇಲ್ಲ ಗುಂಟೆ 26.08 ಜಮೀನಿನ ಪೈಕಿ ಎಕರೆ ಇಲ್ಲಾ ಗುಂಟೆ ಹನ್ನೆರಡು (0ಎ-12ಗು) ಆಕಾರ ರೂ. 0-13 ಪೈಸೆಯುಳ್ಳ ತರಿಯ ಜಮೀನಿಗೆ ಚಕ್ಕುಬಂದಿ: **ಪೂರ್ವ** - ಬನ್ನಿಕೋಡು ತಿಪ್ಪಣ್ಣನವರ ಜಮೀನು, **ಪಶ್ಚಿಮ** - ಶ್ರೀನಿವಾಸರಾವ್ ಇವರ ಜಮೀನು, **ಉತ್ತರ** - ಬೀರಪ್ಪ ಇವರ ಜಮೀನು, **ದಕ್ಷಿಣ** - ಕೊಳ್ಳೆಪ್ಪರ ಹನುಮಂತಪ್ಪನವರ ಜಮೀನು.

**ದಾವಣಗೆರೆ**
**ದಿನಾಂಕ: 19-07-2021**

**ಮಲ್ಲಿಕಾರ್ಜುನ ಕಣವಿ,** ಬಿ.ಎ, ಎಲ್‌ಎಲ್.ಎಂ. ವಕೀಲರು,
**ನಂ.5 & 6, 1ನೇ ಅಂತಸ್ತು, ದಾವಣಗೆರ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್,**
**ಹೋಟೆಲ್ ಪೂಜಾ ಇಂಟರ್ ನ್ಯಾಷನಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-577006,**


# ಮುಖರ್ಜಿ ಹುಟ್ಟುಹಬ್ಬಕ್ಕೆ 30 ಸಾವಿರ ಬೀಜದುಂಡೆ



ಹರಿಹರ, ಜು.21- ಶ್ಯಾಮ್ ಪ್ರಸಾದ್ ಮುಖರ್ಜಿ ಹುಟ್ಟು ಹಬ್ಬದ ನಿಮಿತ್ತ ಕೊಂಡಜ್ಜಿ ಮತ್ತು ಕೊಮಾರನಹಳ್ಳಿ ಅರಣ್ಯ ಪ್ರದೇಶದಲ್ಲಿ ಇನ್ನೂ ಮೂರು-ನಾಲ್ಕು ದಿನಗಳಲ್ಲಿ 30 ಸಾವಿರ ಬೀಜದ ಉಂಡೆಗಳನ್ನು ಹಾಕುವ ಮೂಲಕ ಸಸಿಗಳನ್ನು ನೆಡುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಹನಗವಾಡಿ ಎಸ್.ಎಂ. ವೀರೇಶ್ ತಿಳಿಸಿದ್ದಾರೆ.

ನಗರದ ರಚನಾ ಕ್ರೀಡಾ ಟ್ರಸ್ಟ್‌ನಲ್ಲಿ ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಚಿತ್ರದುರ್ಗ ಮತ್ತು ಮಲೆನಾಡು ಭಾಗದ ಅರಣ್ಯ ಪ್ರದೇಶದಲ್ಲಿ ಉಂಡೆಗಳನ್ನು ಹಾಕುವ ಕೆಲಸವನ್ನು ಸ್ವಯಂ ಸೇವಕ ಸಂಘಟನೆಯ ಮುಖಂಡರು ಮಾಡಿದ್ದರಿಂದ ಪ್ರೇರಣೆಗೊಂಡು ಕಾಡಿನಲ್ಲಿ ಇರುವ ಪ್ರಾಣಿ-ಪಕ್ಷಿಗಳಿಗೆ ಅನುಕೂಲ ಆಗಲು ದಾವಣಗೆರೆಯ ಜಿಎಂಐಟಿ ಕಾಲೇಜು ಹಿಂಬದಿಯಲ್ಲಿ ಕಳೆದ ಹತ್ತು ದಿನಗಳಿಂದ ಹತ್ತು ಲೋಡ್ ಗುಣಮಟ್ಟದ ಮಣ್ಣನ್ನು ತರಿಸಿ 20ಕ್ಕೂ ಹೆಚ್ಚು ಉತ್ಕೃಷ್ಟ ತಳಿಗಳಿಂದ ಸಂಸದರು, ಜಿಲ್ಲೆಯ ಎಲ್ಲಾ ಶಾಸಕರು, ಮಾಜಿ ಶಾಸಕರು, ಪಕ್ಷದ ವಿವಿಧ ಮಂಡಲದ ಸುಮಾರು 500 ಪ್ರಮುಖರು ಸೇರಿ ಸುಮಾರು 1 ಲಕ್ಷದ 5 ಸಾವಿರ ಉಂಡೆಗಳನ್ನು ತಯಾರಿಸಿ ಸಿದ್ಧತೆ ಮಾಡಲಾಗುತ್ತಿದೆ. ಅದರಲ್ಲಿ ಹರಿಹರ ತಾಲ್ಲೂಕಿನ ಕೊಮಾರನಹಳ್ಳಿ ಮತ್ತು ಕೊಂಡಜ್ಜಿ ಅರಣ್ಯ ಪ್ರದೇಶದಲ್ಲಿ 30 ಸಾವಿರ ಉಂಡೆಗಳನ್ನು ಹಾಕಲು ಸಿದ್ಧಪಡಿಸಲಾಗಿದೆ. ಕಾಡು ಬೆಳೆದರೆ ಮಳೆ ಬೆಳೆಗಳು ಚೆನ್ನಾಗಿ ಬರುತ್ತವೆ. ಹಾಗಾಗಿ ಪಕ್ಷವು ಈ ಕಾರ್ಯಕ್ಕೆ ಮುಂದಾಗಿದ್ದು, ಪ್ರತಿ ವರ್ಷವೂ ಸಹ 1 ಲಕ್ಷ ಉಂಡೆಗಳನ್ನು ತಯಾರಿಸಿ ಕಾಡಿನಲ್ಲಿ ಹಾಕುವುದಾಗಿ ಹೇಳಿದರು.

ಹರಿಹರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಬಿಜೆಪಿ ಸಂಪೂರ್ಣ ಬೆಂಬಲ ಇದೆ. ಆದರೆ ಕೇಂದ್ರದ ವೈದ್ಯಕೀಯ ಇಲಾಖೆಯ ಪ್ರಕಾರ ಹರಿಹರ ನಗರದಲ್ಲಿ ಮಾಡುವುದಕ್ಕೆ ತಾಂತ್ರಿಕ ಮಾನದಂಡಗಳ ತೊಂದರೆ ಇದೆ ಎಂದು ಹೇಳುತ್ತಿದ್ದಾರೆ. ಅದನ್ನು ಬಿಟ್ಟು ಸಂಸದರು ದಾವಣಗೆರೆ ನಗರದಲ್ಲಿ ಖಾಸಗಿ ಆಸ್ಪತ್ರೆಯನ್ನು ಪ್ರಾರಂಭಿಸುವ ಉದ್ದೇಶದಿಂದ ಹೇಳಿಕೆಯನ್ನು ಕೊಡಿಸಿರುವುದಿಲ್ಲ. ಒಂದು ವೇಳೆ ಎಲ್ಲರು ಇನ್ನೊಂದು ಸಾರಿ ಇದಕ್ಕೆ ಸಂಬಂಧಿಸಿದ ಇಲಾಖೆಯ ಜೊತೆಯಲ್ಲಿ ಚರ್ಚೆ ಮಾಡುವುದಕ್ಕೆ ಮುಂದಾದರೆ ನಾನು ಕೂಡ ಭಾಗವಹಿಸಲು ಸಿದ್ಧವಿರುವುದಾಗಿ ವೀರೇಶ್ ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ, ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷ ಹಲಸಬಾಳು ಶಿವಾನಂದಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ವಿಜಯಕುಮಾರ್, ಹನುಮಂತಪ್ಪ, ರಜನಿಕಾಂತ್, ಸುರೇಶ್ ತೇರದಾಳ, ರಾಘವೇಂದ್ರ, ರಾಜ್ಯ ಮಹಿಳಾ ಕಾರ್ಯಕಾರಿಣಿ ಸಮಿತಿಯ ಸದಸ್ಯೆ ಪ್ರಮೀಳಾ ನಲ್ಲೂರು, ರೂಪಾ ಕಾಟ್ವೆ, ತುಳಜಪ್ಪ ಭೂತೆ, ಚಂದ್ರಪ್ಪ, ಮಲೇಬೆನ್ನೂರು ರಾಜು, ಸಿದ್ದಪ್ಪ, ವೀರೇಶ್ ಆದಾಪುರ, ಸಾಲಕಟ್ಟೆ ಸಿದ್ದಪ್ಪ, ಶ್ರೀನಿವಾಸ್ ಚಂದಾಪೂರ್, ಪ್ರಶಾಂತ್ ಇನ್ನಿತರರಿದ್ದರು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte